ವಿಶ್ವಯುಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖ ಪತ್ರಿಕೆ

ಸಂಪುಟ 2 | ಸಂಚಿಕೆ 9 | ಮಾರ್ಚ್ 2, 1980 | 40 ಪೈಸೆ

ಶ್ರೀ ಗುಂಡೂರಾಯರ ಮಂತ್ರಿಮಂಡಳದ ವಿಸ್ತರಣೆ

ಶ್ರೀ ಗುಂಡೂರಾಯರ ನೇತೃತ್ವದ ಮೂರು ಜನರ ಮಂತ್ರಿಮಂಡಲವು ಜನವರಿ ಎರಡನೆಯ ವಾರದಲ್ಲಿ ರಚನೆಯಾಗಿದ್ದರೂ ಅದರ ಮೊದಲ ಹಂತದ ವಿಸ್ತರಣೆಯು ನಿರೀಕ್ಷೆಗಿಂತಲೂ ಹೆಚ್ಚು ಧೀರ್ಘ ಕಾಲದ ನಂತರ ಈಗ ಫೆಬ್ರವರಿ ಕೊನೆಯ ವಾರದಲ್ಲಿ ರೂಪುಗೊಂಡಿದೆ. ಹೊಸದಾಗಿ ನೇಮಕಗೊಂಡ 8 ಸಂಪುಟ ಸ್ಥಾನದ ಸಚಿವರೂ, 5 ರಾಜ್ಯ ಸಚಿವರೂ ಸೇರಿ ಒಟ್ಟು 16 ಸಚಿವರ ಮಂತ್ರಿಮಂಡಲ ಆದಂತಾಯಿತು. ಸಚಿವ ಸಂಪುಟದ ಎರಡನೆಯ ಹಂತದ ವಿಸ್ತರಣೆಯನ್ನು ಬಜೆಟ್ ಅಧಿವೇಶನದ ನಂತರ ಮಾಡಲಾಗುವುದೆಂಬ ಆಶ್ವಾಸನೆಯನ್ನು ಮುಖ್ಯಮಂತ್ರಿಯವರು ಕೊಟ್ಟಿದ್ದಾರೆ. ಆದ್ದರಿಂದಲೇ ಹಲವು ಮುಖ್ಯ ಇಲಾಖೆಗಳನ್ನೆಲ್ಲಾ ತಮ್ಮಲ್ಲೇ ಅವರು ಇಟ್ಟುಕೊಂಡಿದ್ದಾರೆ.

ಈಗಿನ ವಿಸ್ತರಣೆಯು ಕಾಂಗ್ರೆ ಪಕ್ಷದಲ್ಲಿ ತೀವ್ರ ಅಸಮಾಧಾನಕ್ಕೆಡೆ ಕೊಟ್ಟಿದೆಂಬುದು ಬಲ್ಲ ಮೂಲಗಳಿಂದ ತಿಳಿದು ಬಂದಿದೆ. ಲೋಕಸಭಾ ಚುನಾವಣೆಯ ಪೂರ್ವದಲ್ಲಿದ್ದ ಕಾಂಗ್ರೆ ಸದಸ್ಯರಿಗೂ ಇದು ತೃಪ್ತಿ ನೀಡಿಲ್ಲ; ಚುನಾವಣೆಯ ನಂತರ ಪಕ್ಷಾಂತರಗೊಂಡವರಿಗಂತೂ ತೀವ್ರ

ಸಂಪಾದಕೀಯ

ನಿರಾಶೆಯಾಗಿದೆ. ಹಳಬರಲ್ಲಿ ಹಲವರಿಗೆ ಮಂತ್ರಿ ಪದವಿ ಸಿಗಬಹುದೆಂಬ ಆಸೆಯಿತ್ತು. ಆದರೆ ಅದು ದೊರೆಯದಿದ್ದುದರಿಂದ ಪ್ರತಿಭಟನೆ ಬರುತ್ತಿದೆ. ಇತ್ತೀಚೆಗೆ ಪಕ್ಷಾಂತರಗೊಂಡವರಲ್ಲಿ ತಮಗೆ ಮಂತ್ರಿ ಪದವಿ ಖಂಡಿತವೆಂದು ನಂಬಿದವರು ಈಗ ತುಂಬಾ ಪೇಚಿಗೆ ಸಿಕ್ಕಿಹಾಕಿಕೊಂಡಿದ್ದಾರೆ. ಪಾರ್ಟಿಯಲ್ಲಿ ಅವರಿಗೆ ಗೌರವವೂ ಇಲ್ಲ, ಮಂತ್ರಿಮಂಡಲದಲ್ಲಿ ಸ್ಥಾನವೂ ಇಲ್ಲದ ಸಂಕಟವನ್ನು ಅನುಭವಿಸುತ್ತಿದ್ದಾರೆ. ಎರಡನೆಯ ಹಂತದ ಸಂಪುಟದ ವಿಸ್ತರಣೆಯಲ್ಲಾದರೂ ತಮಗೆ ಸ್ಥಾನ ದೊರೆಯಬಹುದೆಂಬುದಾಗಿ ಹಲವರು ನಿರೀಕ್ಷಿಸುತ್ತಿದ್ದಾರೆ.

ಹೊಸದಾಗಿ ಸೇರಿದವರು ಪಕ್ಷಾಂತರಿಗಳೆಂದೂ ಅವರಿಗೆ ಮಂತ್ರಿ ಪದವಿ ಕೊಡಬಾರದೆಂದೂ ಹಳೆ ಕಾಂಗ್ರೆ ಸದಸ್ಯರ ವಾದ. ಅವರ ಬೆಂಬಲದಿಂದ ಮಂತ್ರಿಮಂಡಲದ ರಚನೆಯನ್ನೇ ಅವರು ವಿರೋಧಿಸುತ್ತಿದ್ದರು. ಶಾಸನ ಸಭೆಯನ್ನು ವಿಸರ್ಜನೆ ಮಾಡಿ ಹೊಸ ಚುನಾವಣೆ ನಡಸಬೇಕೆಂದು ಶ್ರೀ ಬಂಗಾರಪ್ಪ, ಪೊಯಿಲಿ ಮುಂತಾದವರೂ, ಕಾಂಗ್ರೆ ಪಕ್ಷದ

[ಕಡೆಯ ಪುಟ ನೋಡಿ]

ಸೇರಾಮ್‌ಪೋರ್‌ನಲ್ಲಿ ಸಿ. ಪಿ. ಐ. (ಎಂ) ಜಯ

ಪಶ್ಚಿಮ ಬಂಗಾಲದ ಸೇರಾಮ್‌ಪೋರ್, ಕರ್ನಾಟಕದ ಗುಲ್ಬರ್ಗ, ಉತ್ತರ ಪ್ರದೇಶದ ಖೇರಿ ಮತ್ತು ರಾಯಬರೇಲಿ ಮತ್ತು ಒರಿಸ್ಸಾದ ಕಿಯೊಂಜಾರ್ ಲೋಕಸಭಾ ಕ್ಷೇತ್ರಗಳಲ್ಲಿ ಫೆಬ್ರವರಿ 24ರಂದು ಚುನಾವಣೆ ನಡೆಯಿತು. ಈ ಉಪ ಚುನಾವಣೆಯಲ್ಲಿ ಸೇರಾಮ್‌ಪೋರ್‌ನಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಮುಂದಾಳು ಕಾಮ್ರೇಡ್ ದಿನೇಶ್ ಭಟ್ಟಾಚಾರ್ಯ ಅವರು ಮತ್ತು ಇನ್ನುಳಿದ ನಾಲ್ಕು ಕ್ಷೇತ್ರಗಳಲ್ಲಿ ಕಾಂಗ್ರೆಯ ಅಭ್ಯರ್ಥಿಗಳೂ ಜಯಗಳಿಸಿರುವರು.

ಇತ್ತೀಚೆಗೆ ತಾನೆ ನಡೆದ ಏಳನೇ ಲೋಕಸಭಾ ಚುನಾವಣೆಯಲ್ಲಿ ವಿರೋಧ ಪಕ್ಷಗಳೊಳಗೆ ಒಗ್ಗಟ್ಟಿಲ್ಲದಿದ್ದ ಹಿನ್ನೆಲೆಯಲ್ಲಿ ಮತ್ತೆ ಸರ್ವಾಧಿಕಾರಿ ಇಂದಿರಾ ಕಾಂಗ್ರೆಸ್ ಅಧಿಕಾರ ಗುದ್ದುಗೆಯನ್ನೇರಿದ ಸ್ವಲ್ಪದರಲ್ಲೇ ನಡೆದ ಉಪ ಚುನಾವಣೆ ಬಹಳ ಮಹತ್ವದಿಂದ ಕೂಡಿದೆ. ಕಾಂಗ್ರೆ ವಿರುದ್ಧದ ಮತಗಳು ಚದುರಿಹೋಗದಂತೆ ಮಾಡಿ, ಮತ್ತೆ ಅಧಿಕಾರಕ್ಕೇರಿರುವ ಸರ್ವಾಧಿಕಾರಿ ಶಕ್ತಿಯನ್ನು ಪರಿಣಾಮಕಾರಿಯಾಗಿ ಎದುರಿಸುವುದಕ್ಕಾಗಿ ವಿರೋಧ ಪಕ್ಷಗಳೆಲ್ಲ ಒಂದಾಗಿ ಕಾಂಗ್ರೆ ವಿರುದ್ಧ ಏಕೈಕ ಅಭ್ಯರ್ಥಿಗಳನ್ನು ನಿಲ್ಲಿಸಿದ್ದುವು. ಸಿ.ಪಿ.ಐ(ಎಂ), ಸಿ.ಪಿ.ಐ, ಕಾಂಗ್ರೆಸ್(ಯು) ಲೋಕದಳ ಮತ್ತು ಜನತಾ ಪಕ್ಷಗಳೆಲ್ಲಾ ವಿರುದ್ಧದ ಮತಗಳು ಹಂಚಿಹೋಗದಂತೆ ಒಂದಾಗಿ ಹೋರಾಡಿದುವು.

ಸೇರಾಮ್‌ಪೋರ್ ಚುನಾವಣೆ ಬಗ್ಗೆ ಪತ್ರಿಕೆಗಳಲ್ಲಿ ಬಹಳಷ್ಟು ಊಹಾಪೋಹಗಳು ಬಂದಿದ್ದುವು. ಸೇರಾಮ್‌ಪೋರ್‌ನಲ್ಲಿ ಸಿ.ಪಿ.ಐ(ಎಂ) ಅಭ್ಯರ್ಥಿ ಸೋತರೆ, ಪಶ್ಚಿಮ ಬಂಗಾಲದ ಎಡರಂಗ ಸರಕಾರವೂ ಬೇಗನೆ ಪತನವಾಗುವುದೆಂದೂ, ಇಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಅಭ್ಯರ್ಥಿಯು ಗೆದ್ದಲ್ಲಿ ಬಂಗಾಲದಲ್ಲಿ ಕಾಂಗ್ರೆಯು ಸತ್ತಂತೆ ಎಂದೂ ಕೆಲವು ಪತ್ರಿಕೆಗಳಲ್ಲಿ ಬಂದಿತ್ತು.

ಏಳನೇ ಲೋಕಸಭಾ ಚುನಾವಣೆಯ ಫಲಿತಾಂಶದ ಹಿನ್ನೆಲೆಯಲ್ಲಿ, ಶ್ರೀಮತಿ ಇಂದಿರಾಗಾಂಧಿಯವರು ಕೇರಳಕ್ಕೆ ಸುಂಟರ ಗಾಳಿಯಂತೆ ದಾಳಿ

[ಕಡೆಯ ಪುಟ ನೋಡಿ]

ಗ್ರೋಮಿಕೊ ಭೇಟಿ

ಅಫ್‌ಘಾನಿಸ್ತಾನದಲ್ಲಿನ ರಾಜಕೀಯ ಬದಲಾವಣೆಗಳು ಮತ್ತು ಸೋವಿಯತ್ ರಶ್ಯಾದ ಮಧ್ಯಪ್ರವೇಶದ ಬಗ್ಗೆ ಭಾರತ ತಳೆದಿರುವ ಧೋರಣೆಯ ಹಿನ್ನೆಲೆಯಲ್ಲಿ, ರಶ್ಯಾದ ವಿದೇಶ ಮಂತ್ರಿ ಗ್ರೋಮಿಕೊರವರ ಭಾರತದ ಭೇಟಿ ಜಗತ್ತಿನ ಗಮನ ಸೆಳೆಯಿತು.

ವಿದೇಶಿ ಗುತ್ತೇದಾರಿ ಬಂಡವಾಳಶಾಹಿ ಹಾಗೂ ಭಾರತೀಯ ದೊಡ್ಡ ಬಂಡವಳಿಗರ ನಿಯಂತ್ರಣದಲ್ಲಿರುವ ಭಾರತದ ಪತ್ರಿಕೆಗಳು ಅಫ್‌ಘಾನಿಸ್ತಾನದ ಘಟನೆಗಳ ಬಗ್ಗೆ ತಳೆದಿರುವ ಧೋರಣೆ, ಈ ಭೇಟಿ ಕಾಲದಲ್ಲಿ ಸ್ಪಷ್ಟವಾಗಿದೆ. ದೇಶದ ಎಲ್ಲಾ ಪ್ರಮುಖ ದಿನ ಪತ್ರಿಕೆಗಳು ಈ ಭೇಟಿ ಬಗ್ಗೆ ಟೀಕಾತ್ಮಕ ಅಗ್ರ ಲೇಖನ, ಸಂಪಾದಕೀಯ, ವರದಿಗಳನ್ನು ಬರೆದವು. ಕೆಲವು ಪತ್ರಿಕೆಗಳು ಗ್ರೋಮಿಕೊರನ್ನು 'ಬರಿಗೈಲಿ ಹಿಂದೆ ಕಳುಹಿಸಿದ' ಶ್ರೀಮತಿ ಗಾಂಧಿಯವರ 'ಸೂಕ್ಷ್ಮ ಮತಿ ನಾಯಕತ್ವ' ಕೊಂಡಾಡಿದರೆ, ಇನ್ನೂ ಕೆಲವು ಪತ್ರಿಕೆಗಳು ರಶ್ಯನ್ ಸೇನೆ ವಾಪಸಾತಿಯ ಬಗ್ಗೆ ಅವರಿಂದ ಭಾರತಕ್ಕೆ ಯಾವುದೇ ಭರವಸೆ ತೆಗೆದುಕೊಳ್ಳುವುದು ಸಾಧ್ಯವಾಗಲಿಲ್ಲವೆಂದು ವಿಷಾದ ವ್ಯಕ್ತಪಡಿಸಿದವು. ಈ ಪತ್ರಿಕೆಗಳು ಹಾಗೂ ಇತರ ಸಾಮ್ರಾಜ್ಯಶಾಹಿ ಶೀತಲ ಸಮರ ಸಮರ್ಥಕರು ಮತ್ತು ಇತರ ಕಮ್ಯುನಿಸ್ಟ್-ವಿರೋಧಿಗಳು ರಶ್ಯನ್ ಸೇನಾಪಡೆಗಳ ವಾಪಸಾತಿನ ತಾರೀಖು ಘೋಷಿಸಲು ಗ್ರೋಮಿಕೊ ಮಾಸ್ಕೋದಿಂದ ದೆಹಲಿಯವರೆಗೆ ಬಂದಿದ್ದಾರೆಂದು ತಿಳಿದಂತೆ ಕಾಣುತ್ತದೆ!

ಮೊದಲನೆಯದಾಗಿ, ಅಮೇರಿಕವೇ ಮೊದಲಾದ ಪಾಶ್ಚಿಮಾತ್ಯ ಮತ್ತು ಇತರ ದೇಶಗಳ ಅಧಿಕಾರಿಗಳು, ರಾಜಕೀಯ ನಾಯಕರ ಆಗಮನದ ಹಿನ್ನೆಲೆಯಲ್ಲಷ್ಟೇ ಗ್ರೋಮಿಕೊ ಆಗಮಿಸಿರುವುದು ಎಂದು ಗಮನಿಸಬೇಕಾದ ವಿಚಾರ. ಅಫ್‌ಘಾನಿಸ್ತಾನದ ಬೆಳವಣಿಗೆಗಳ ನಿಜವಾದ ಹಿನ್ನೆಲೆ ಹಾಗೂ ರಶ್ಯಾದ ಮಧ್ಯ ಪ್ರವೇಶದ ಬಗ್ಗೆ ಸ್ವತಃ ವಿವರಣೆ ನೀಡುವುದು ಮತ್ತು ಭಾರತಕ್ಕೆ ಇದರ ಬಗ್ಗೆ ಇರಬಹುದಾದ ಸಂಶಯಗಳನ್ನು ನಿವಾರಿಸುವುದು. ಈ ಭೇಟಿಯ ಉದ್ದೇಶವಾಗಿತ್ತು.

ರಶ್ಯಾದ ಗಡಿಯ ಹತ್ತಿರವೇ ತನ್ನ ಮಿಲಿಟರಿ ಬಲ ಹೆಚ್ಚಿಸುವ, ಪ್ರದರ್ಶಿಸುವ; ಹಾಗೂ ಸೀಟೊ, ಸೆಂಟೊ ಮತ್ತು ಏಶಿಯನ್ ಮುಂತಾದ ಮಿಲಿಟರಿ ಒಪ್ಪಂದಗಳನ್ನು ಪುನರುತ್ಥಾನಗೊಳಿಸುವ ಅಮೇರಿಕಾದ ಯತ್ನದಿಂದ ಬೇರ್ಪಡಿಸಿ, ಅಫ್‌ಘಾನಿಸ್ತಾನದ ಘಟನೆಗಳನ್ನು ವಿಶ್ಲೇಷಿಸುವುದು ಸಾಧ್ಯವಿಲ್ಲ.

ಅಫ್‌ಘಾನಿಸ್ತಾನದ ಏಪ್ರಿಲ್ ಕ್ರಾಂತಿಯ ಮೊದಲೇ ಅಲ್ಲಿ ಕ್ಷಿಪ್ರ ಕ್ರಾಂತಿ ನಡೆಸಿ ಕೈಗೊಂಬೆ ಸರಕಾರ ಸ್ಥಾಪಿಸುವ ಯೋಜನೆ ಹಾಕಲಾಗಿತ್ತು ಎಂದು ಕೆಲವು ಅಮೇರಿಕಾದ ಪತ್ರಿಕೆಗಳೇ ವರದಿ ಮಾಡಿವೆ. ಏಪ್ರಿಲ್ ಕ್ರಾಂತಿ ಈ ಯೋಜನೆಗಳನ್ನೆಲ್ಲಾ ಮಣ್ಣುಪಾಲು ಮಾಡಿದ್ದು ಅದನ್ನು ಕುಪಿತಗೊಳಿಸಿದೆ; ಏಪ್ರಿಲ್ ಕ್ರಾಂತಿಯ ನಂತರ ಸ್ಥಾಪಿತವಾದ ತರಾಕಿಯವರ ಸರಕಾರದ ಭೂಸುಧಾರಣೆ ಮುಂತಾದ ಪ್ರಗತಿಪರ ಧೋರಣೆಗಳಿಂದ, ತಮ್ಮ ವಿಶೇಷ ಸೌಲಭ್ಯ ಕಳೆದುಕೊಂಡ ಪಾಳೆಯಗಾರಿ ಹಾಗೂ ಧರ್ಮಾಂಧ ಶಕ್ತಿಗಳಿಗೆ ಶಸ್ತ್ರಾಸ್ತ್ರ ತರಬೇತಿ ಪ್ರೋತ್ಸಾಹಗಳನ್ನು ಪಾಕಿಸ್ತಾನದ ಮೂಲಕ ನೀಡುತ್ತಾ, ವಿಧ್ವಂಸಕಾರಿ ಚಟುವಟಿಕೆಗಳನ್ನು ನಡೆಸುತ್ತಾ ಆ ಸರಕಾರವನ್ನು ಉರುಳಿಸಲು ಪ್ರಯತ್ನ ನಡೆಸುತ್ತಿರುವುದು ಅಮೇರಿಕಾವೇ ಎಂದು ಸಹ ನೆನಪಿನಲ್ಲಿಡಬೇಕು. ಈ ಶಕ್ತಿಗಳು ಅಂದಿನಿಂದಲೂ ಪಾಕಿಸ್ತಾನಿ ಗಡಿ ಪ್ರದೇಶಗಳಿಂದ, ಪಾಕಿಸ್ತಾನದ ಸೈನ್ಯದ ಸಕ್ರಿಯ ಸಹಾಯದಿಂದ ಈ ಪ್ರಯತ್ನ ಮುಂದುವರಿಯುತ್ತಾ ಇತ್ತೀಚೆಗೆ ತೀವ್ರಗೊಳಿಸಿರುವುದು ಜಗತ್ತಿಗೆ ತಿಳಿದಿದೆ. ಹಲವು ಕಡೆ ಪಾಕಿಸ್ತಾನದ ಸೈನಿಕರೇ ಅಫ್‌ಘಾನರಂತೆ ವೇಷಧರಿಸಿ ಹೋರಾಟ ನಡೆಸುತ್ತಿರುವುದು ಕಂಡುಬಂದಿದೆ. ಈ ಚಟುವಟಿಕೆಗಳನ್ನು ತಡೆಯಲು ಸಹಾಯಮಾಡಲು ಅಫ್‌ಘಾನ್ ಸರ್ಕಾರದ ಕೋರಿಕೆ ಮೇರೆಗೆ ಪ್ರವೇಶಿಸಿರುವ ರಶ್ಯಾ ಸೇನಾಪಡೆಗಳು ಈ ವಿಧ್ವಂಸಕಾರಿ ಚಟುವಟಿಕೆಗಳು ಇನ್ನೂ ತೀವ್ರಗತಿಯಲ್ಲಿ ಮುಂದುವರಿಯುತ್ತಿರುವಾಗ, ಹಿಂದಿರುಗಬೇಕೆಂಬುದಕ್ಕೆ ಏನು ಅರ್ಥವಿದೆ? ಅಮೇರಿಕಾ ಮತ್ತು ಅದರ ಬಾಲಬಡುಕ ಪಾಕಿಸ್ತಾನದ ಸಕ್ರಿಯ ಸಹಾಯ ನಿಂತು, ಸರ್ಕಾರ ಉರುಳಿಸುವ ಚಟುವಟಿಕೆಗಳು ನಿಂತರೆ, ರಶ್ಯಾ ಸೇನಾಪಡೆಗಳು ಹಿಂತಿರುಗುತ್ತವೆ ಎಂಬುದು ರಶ್ಯದ ನಿಲುವು.

ಏಪ್ರಿಲ್ ಕ್ರಾಂತಿ ವಿರೋಧಿ ಶಕ್ತಿಗಳಿಗೆ ಸಹಾಯ ನೀಡುವುದು ಜಗತ್ತಿಗೆ ತಿಳಿದಿದ್ದರೂ ಪಾಕಿಸ್ತಾನದ ಸರ್ವಾಧಿಕಾರಿ ಜಿಯಾ-ಉಲ್-ಹಕ್ ಮಾತ್ರ ತನಗೆ ಈ ಬಗ್ಗೆ ಏನೂ ತಿಳಿಯದು ಎಂದು ಹೇಳುತ್ತಿದ್ದಾರೆ. ವಾಷಿಂಗ್‌ಟನ್ ಪೋಸ್ಟ್ ಎಂಬ ಅಮೇರಿಕನ್ ಪತ್ರಿಕೆ ತನ್ನ ಫೆಬ್ರ

[ಕಡೆಯ ಪುಟ ನೋಡಿ]

"ಏಕಪಕ್ಷ ಸರಕಾರ ಸ್ಥಾಪನೆಯ ಮೊದಲ ಹೆಜ್ಜೆ"

—ಪೊಲಿಟ್‌ಬ್ಯೂರೊ ಹೇಳಿಕೆ

ಇಂದಿರಾ ಗಾಂಧಿಯವರ ನೇತೃತ್ವದ ಕಾಂಗ್ರೆಸ್ ಸರ್ಕಾರವು ತಾನು ಅಧಿಕಾರ ವಹಿಸಿಕೊಂಡ ಐದೇ ವಾರದೊಳಗೆ ಉತ್ತರ ಭಾರತದ ಒಂಬತ್ತು ರಾಜ್ಯಗಳ ವಿಧಾನ ಸಭೆಗಳನ್ನು ವಿಸರ್ಜಿಸಿ ಆ ರಾಜ್ಯಗಳ ಮೇಲೆ ರಾಷ್ಟ್ರಾಧ್ಯಕ್ಷರ ಆಳ್ವಿಕೆಯನ್ನು ಹೇರಿರುವುದು ಇಂದಿರಾಗಾಂಧಿಯವರಾಗಲೀ ಅಥವಾ ಆಕೆಯ ಕಾಂಗ್ರೆಸ್ ಪಕ್ಷವಾಗಲೀ ತುರ್ತುಪರಿಸ್ಥಿತಿಯ ಕಾಲದ ಕರಾಳ ಆಡಳಿತದ ಫಲವಾದ 1977ರ ಚುನಾವಣಾ ಸೋಲಿನ ಯಾವ ಪಾಠವನ್ನೂ ಕಲಿತಿಲ್ಲ ಎಂಬ ಜನತೆಯ ಭಯವನ್ನು ಸ್ಥಿರಪಡಿಸಿದೆ. ಮುಂಬರುವ ರಾಜ್ಯಸಭೆಯ ದ್ವೈವಾರ್ಷಿಕ ಚುನಾವಣೆಗಳಲ್ಲಿ ವಿರೋಧ ಪಕ್ಷಗಳು ತಮ್ಮ ಪ್ರತಿನಿಧಿಗಳನ್ನು ಕಳುಹಿಸುವುದನ್ನು ತಡೆಯಲೆಂದೇ ಈ ಕ್ರಮ ಕೈಗೊಳ್ಳಲಾಗಿದೆ ಎಂಬ ಕ್ರೂರ ಸತ್ಯವನ್ನು ಕಾಂಗ್ರೆಸ್ ಕ್ರಮ ಸಮರ್ಥಿಸುವ ಯಾರೂ ಕೂಡ ಮುಚ್ಚಿಡಲು ಸಾಧ್ಯವಿಲ್ಲ. ವಿವಿಧ ವಿರೋಧ ಪಕ್ಷಗಳು ನಡೆಸುತ್ತಿರುವ ಯಾವುದೇ ವಿಧಾನ ಸಭೆಗಳನ್ನು ವಿಸರ್ಜಿಸಬಾರದೆಂದು ರಾಜ್ಯಸಭೆಯು ಮಾಡಿದ ತೀರ್ಮಾನಕ್ಕೆ ಇಂದಿರಾ ಸರ್ಕಾರವು ಯಾವ ಬೆಲೆಯನ್ನೂ ಕೊಟ್ಟಿಲ್ಲ ಎಂಬುದನ್ನು ಇಲ್ಲಿ ಗುರುತಿಸಬೇಕಾಗಿದೆ. ಇಂದಿರಾಗಾಂಧಿ ಸರ್ಕಾರವು ತನ್ನ ಪೆನ್ನಿನ ಒಂದೇ ಏಟಿನಿಂದ ಒಂಬತ್ತು ರಾಜ್ಯಗಳ ವಿಧಾನ ಸಭೆಗಳನ್ನು ವಜಾಮಾಡಿರುವುದು ಸರ್ವಾಧಿಕಾರವಲ್ಲದೆ ಮತ್ತೇನೂ ಆಗಲಾರದು. ಕೇಂದ್ರದಲ್ಲೂ ಮತ್ತು ರಾಜ್ಯಗಳಲ್ಲೂ ಒಂದೇ ಪಕ್ಷದ ಏಕಸ್ವಾಮ್ಯ ಅಧಿಕಾರವನ್ನು ಸ್ಥಾಪಿಸುವತ್ತ ಅವರ ಈ ಕ್ರಮ ಜರುಗಿದೆ. ಸರ್ವಾಧಿಕಾರ ಸ್ಥಾಪನೆಯಲ್ಲಿ ಮೊದಲ ಹೆಜ್ಜೆಯು ಈ ಆಕ್ರಮಣವಾಗಿದೆ. ಆದ್ದರಿಂದ ದೇಶದ ಜನತೆ, ಪ್ರಜಾಪ್ರಭುತ್ವ ಶಕ್ತಿಗಳು ಮತ್ತು ಎಲ್ಲ ವಿರೋಧ ಪಕ್ಷಗಳು, ಗುಂಪುಗಳು ಹಾಗೂ ವ್ಯಕ್ತಿಗಳು ಈ ಸವಾಲನ್ನು ಅಂಗೀಕರಿಸಿ ಸರ್ವಾಧಿಕಾರವನ್ನು ಸೋಲಿಸಬೇಕಾಗಿದೆ.

ಚುನಾವಣಾ ವಿಜಯವನ್ನು ಕಾಂಗ್ರೆಸ್ (ಐ) ಪಕ್ಷವು ತಾನು ತುರ್ತುಪರಿಸ್ಥಿತಿಯಲ್ಲಿ ಮಾಡಿದ್ದ ಅತಿರೇಕಗಳ ಮಾನ್ಯತೆ ಎಂದು ಪರಿಗಣಿಸಿದೆ ಎಂಬುದು ಕಳೆದ 30 ದಿವಸಗಳ ಕಾಂಗ್ರೆಸ್ ಆಡಳಿತ ಜನತೆಗೆ ರುಜುವಾತುಪಡಿಸಿದೆ.

ನ್ಯಾಯಾಲಯಗಳಿಂದ ಕೇಸುಗಳನ್ನು ಬೇಗಬೇಗನೆ ವಾಪಸ್ಸು ತೆಗೆದುಕೊಳ್ಳುತ್ತಿರುವುದು. "ಕಿಸ್ಸಾ ಕುರ್ಸಿಕಾ" ಮೊಕದ್ದಮೆಯ ವಿಚಾರಣೆ ನಡೆಸಿದ ಶ್ರೀ ಎನ್. ಕೆ. ಸಿಂಗ್ ಅವರ ದಸ್ತಗಿರಿ ಮುಂತಾದವು ಕೇಂದ್ರ ಸರ್ಕಾರವು ಮತ್ತೆ ಸರ್ವಾಧಿಕಾರದತ್ತ ದೌಡಾಯಿಸುತ್ತಿದೆ ಎಂಬುದಕ್ಕೆ ಸ್ಪಷ್ಟ ಉದಾಹರಣೆಗಳಾಗಿವೆ.

ಕಾಂಗ್ರೆಸ್ (ಐ) ಸರ್ಕಾರದ ಈ ಪ್ರಜಾಪ್ರಭುತ್ವ ವಿರೋಧಿ ನೀತಿಗಳನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ಉಗ್ರವಾಗಿ ಖಂಡಿಸುತ್ತದೆ. ಕಾಂಗ್ರೆಸ್ (ಐ)ನ ಈ ಹೊಸ ಆಕ್ರಮಣವನ್ನು ಸೋಲಿಸಲು, ಪ್ರಜಾಪ್ರಭುತ್ವವನ್ನು ರಕ್ಷಿಸಲು, ರಾಷ್ಟ್ರದ ಐಕ್ಯತೆಯನ್ನು ಕಾಪಾಡಲು ಹಾಗೂ ರಾಜ್ಯಗಳ ಸಾರ್ವಭೌಮತ್ವವನ್ನು ಉಳಿಸಿಕೊಳ್ಳಲು ಎಲ್ಲ ವಿರೋಧ ಪಕ್ಷಗಳು, ಗುಂಪುಗಳು ತಮ್ಮ ಭಿನ್ನಾಭಿಪ್ರಾಯಗಳನ್ನು ಬದಿಗಿಟ್ಟು ಒಗ್ಗೂಡಬೇಕೆಂದು ಸಿ. ಪಿ. ಐ. (ಎಂ) ಕರೆ ಕೊಡುತ್ತದೆ.

ಇಂದಿರಾ ಸರ್ಕಾರದ ಜೊತೆಗೆ ಸಹಕರಿಸುವುದಾಗಿ ಬಹಿರಂಗವಾಗೇ ಆರ್. ಎಸ್. ಎಸ್. ನಾಯಕ ಬಾಳಾಸಾಹೇಬ್ ದೇವರಸ್ ಹೇಳಿರುವುದನ್ನು ಸಿ. ಪಿ. ಐ. (ಎಂ) ಖಂಡಿಸುತ್ತದೆ. 1975-77ರ ತುರ್ತುಪರಿಸ್ಥಿತಿಯ ಅವಧಿಯಲ್ಲಿ ಪ್ರಜಾತಂತ್ರದ ರಕ್ಷಣೆಯಲ್ಲಿ ತಾವೇ ಮುಂಚೂಣಿಯ ಪಾತ್ರ ವಹಿಸಿದ್ದೆವು ಎಂಬ ಆರ್. ಎಸ್. ಎಸ್. ನಾಯಕರ ಹೆಗ್ಗಳಿಕೆಯ ವಿರುದ್ಧ ಬಾಳಾಸಾಹೇಬ್ ದೇವರಸ್ ಮಾತನಾಡುತ್ತಲಿದ್ದಾರೆ. ಪ್ರಜಾಪ್ರಭುತ್ವದ ಆಧಾರದ ಮೇಲಿನ ಜಾತ್ಯಾತೀತ ರಾಷ್ಟ್ರ ನಿರ್ಮಾಣಕ್ಕೆ ಬದ್ಧವಾಗಿರುವ ಜನತಾಪಕ್ಷದೊಳಗಿರುವ ಎಲ್ಲ ನಾಯಕರೂ ಈಗಲಾದರೂ "ದ್ವಿಸದಸ್ಯತ್ವ" ಪ್ರಶ್ನೆಯನ್ನು ಬಗೆಹರಿಸಬೇಕು ಎಂದು ಮಾರ್ಕ್ಸಿಸ್ಟ್ ಪಕ್ಷ ಕರೆ ಕೊಡುತ್ತದೆ. ಈ "ದ್ವಿಸದಸ್ಯತ್ವ"ದ ಪ್ರಶ್ನೆಯೇ ಜನತಾಪಕ್ಷದ ಒಗ್ಗಟ್ಟಿಗೆ ಬಾಧಕವಾಗಿದ್ದ ಅತಿ ಮುಖ್ಯ ಪ್ರಶ್ನೆ ಎಂಬುದನ್ನು ಮರೆಯಬಾರದು.

ಹೊಸದಾಗಿ ಬೆಳೆಯುತ್ತಲಿರುವ ಸರ್ವಾಧಿಕಾರಿ ದುಃಸ್ವಪ್ನವನ್ನು ದಮನ ಮಾಡಲು, ಶ್ರೀಮತಿ ಇಂದಿರಾಗಾಂಧಿ ನಾಯಕತ್ವದ ಕಾಂಗ್ರೆಸ್‌ನ ಏಕ ಪಕ್ಷದ ಆಡಳಿತವನ್ನು ತಪ್ಪಿಸಲು ದೇಶದ ಎಲ್ಲ ಜನರು, ಕಾರ್ಮಿಕರು, ರೈತರು, ಮಧ್ಯಮ ವರ್ಗದವರು ಮತ್ತು ಎಲ್ಲ ಎಡ ಹಾಗೂ ಪ್ರಜಾಪ್ರಭುತ್ವ ಶಕ್ತಿಗಳು ಒಗ್ಗಟ್ಟಾಗಿ ಹೋರಾಡಬೇಕೆಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ಮನವಿ ಮಾಡುತ್ತದೆ.

○

'ಇಂದಿರಾ ನಡೆ ನುಡಿಯಂತಲ್ಲ'

ರಾಷ್ಟ್ರದ ಅತ್ಯುನ್ನತ ಹಾಗೂ ಅತ್ಯಂತ ಜವಾಬ್ದಾರಿಯುತ ಸ್ಥಾನದಲ್ಲಿರುವ ಪ್ರಧಾನಿ ಇಂದಿರಾಗಾಂಧಿಯವರು ತಾವು ನುಡಿದಂತೆ ನಡೆದುಕೊಳ್ಳುವವರಲ್ಲ ಎಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಮುಖಂಡ ಕಾಂ. ಕೆ. ಆರ್. ನಾಯರ್ ಅವರು ಫೆ 20ರಂದು ತುಮಕೂರಿನಲ್ಲಿ ಹೇಳಿದರು.

ಉತ್ತರ ಭಾರತದ ಒಂಬತ್ತು ರಾಜ್ಯದ ವಿಧಾನ ಸಭೆಗಳನ್ನು ಕೇಂದ್ರ ಕಾಂಗ್ರೆಸ್ ಸರ್ಕಾರವು ವಿಸರ್ಜಿಸಿರುವುದರ ವಿರುದ್ಧ ಎಲ್ಲ ವಿರೋಧ ಪಕ್ಷಗಳು ಸಂಯುಕ್ತವಾಗಿ ಏರ್ಪಡಿಸಿದ್ದ ಪ್ರತಿಭಟನಾ ಸಭೆಯಲ್ಲಿ ಭಾಗವಹಿಸಿ ಮಾತನಾಡಿದ ನಾಯರ್ ಅವರು, ವಿರೋಧಿ ಪಕ್ಷಗಳವರು ಸೀಟುಗಳ ಹೊಂದಾಣಿಕೆ ಮಾಡಿಕೊಂಡು ಕಾಂಗ್ರೆಸ್ ಪಕ್ಷವನ್ನು ಎದುರಿಸಿದರೆ ಇಂದಿರಾ ಸೋಲು ಖಚಿತ ಎಂದು ಅಭಿಪ್ರಾಯಪಟ್ಟರು. 1957ರಲ್ಲಿ ಜನತೆಯಿಂದ ಆಯ್ಕೆಗೊಂಡಿದ್ದ ನಂಬೂದರಿಪಾಡ್ ಸರ್ಕಾರವನ್ನು ಇಂದಿರಾ ವಜಾ ಮಾಡಿದ್ದನ್ನು ನೆನಪು ಮಾಡಿಕೊಟ್ಟ ನಾಯರ್ ಅವರು ಪ್ರತಿಪಕ್ಷಗಳನ್ನು ಸಹಿಸದ ಸಂಪ್ರದಾಯವೇ ಇಂದಿರಾಗಾಂಧಿಯ ಜೊತೆಗಿದೆ ಎಂದರು. ಇಂದಿರಾ ವಿರುದ್ಧ ಪ್ರಬಲವಾದ ಪರ್ಯಾಯವಿಲ್ಲದ್ದರಿಂದ ಮಾತ್ರ ಜನತೆ ಆಕೆಯ ಪಕ್ಷಕ್ಕೆ ಓಟು ಮಾಡಬೇಕಾಗಿ ಬಂತೆಂದ ನಾಯರ್ ಅವರು, ಸಮರ್ಥ ಪರ್ಯಾಯ ಒದಗಿಸಿದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಮತ್ತು ಅದರ ಮಿತ್ರ ಪಕ್ಷಗಳನ್ನು ಕೇರಳ, ಬಂಗಾಳ ಮತ್ತು ತ್ರಿಪುರಾಗಳಲ್ಲಿ ಜನತೆ ಆರಿಸಿದ್ದಾರೆಂದು ತೋರಿಸಿದರು. ದುಡಿಯುವ ಜನರೆಲ್ಲ ಸಂಘಟಿತ ಹೋರಾಟ ಮಾಡುವುದರಿಂದ ಮಾತ್ರ ಸರ್ವಾಧಿಕಾರಿಗಳನ್ನು ಸೋಲಿಸಲು ಸಾಧ್ಯ ಎಂದೂ ಸಹ ನಾಯರ್ ಹೇಳಿದರು.

ಸ್ವಾತಂತ್ರ್ಯ ಹೋರಾಟಗಾರರು ಮತ್ತು ತುಮಕೂರಿನ ನ್ಯಾಯವಾದಿಗಳಾದ ಕೆ. ವಿ. ಸುಬ್ರಮಣ್ಯಸ್ವಾಮಿಯವರು ಸಭೆಯನ್ನುದ್ದೇಶಿಸಿ ಮಾತನಾಡಿ ವಿರೋಧ ಪಕ್ಷಗಳೆಲ್ಲ ಒಟ್ಟಾದರೆ ಮಾತ್ರ ಸಾಲದು ಜನಪರ ಪ್ರತಿಜ್ಞೆ ಸ್ವೀಕರಿಸಿ ಅದರಂತೆ ನಿಷ್ಠೆಯಿಂದ ದುಡಿಯಬೇಕೆಂದರು.

ಲೋಕದಳದ ಸದಸ್ಯ ಮತ್ತು ತುಮಕೂರಿನ ನ್ಯಾಯವಾದಿ ಸಿದ್ಧಲಿಂಗಯ್ಯ ಅವರು ಮಾತನಾಡಿ ನ್ಯಾಯಾಂಗ, ಕಾರ್ಯಾಂಗ ಮತ್ತು ಶಾಸಕಾಂಗ ಬುಡಮೇಲು ಮಾಡುವ ಇಂದಿರಾ ಗಾಂಧಿ ಕೃತ್ಯಗಳನ್ನು ಖಂಡಿಸಿದರು.

ಕಾಂಗ್ರೆಸ್ (ಯು) ಮುಖಂಡ ಆರ್. ನಾರಾಯಣ್ ಅವರು ದೇವರಾಜ ಅರಸು ಅವರ ಸಾಧನೆಗಳನ್ನು ಬದಿಗಿಟ್ಟು ಒಂದಾಗಬೇಕೆಂತಲೂ ಮತ್ತು ಯುವಜನರು ಎಚ್ಚೆತ್ತುಕೊಳ್ಳಬೇಕೆಂತಲೂ ಹೇಳಿದರು.

ಬೆಳ್ಳಾವಿ ಕ್ಷೇತ್ರದ ಜನತಾ ಶಾಸಕ ಶಿವನಂಜಪ್ಪನವರು ಮಾತನಾಡಿ ಕೀಳು ದರ್ಜೆಯ ಭಾಷಣಗಳನ್ನು ಮಾಡುವ ಮುಖ್ಯಮಂತ್ರಿ ಗುಂಡೂರಾಯರನ್ನು ಗೇಲಿ ಮಾಡಿದರು.

ಸಭೆಯ ಅಧ್ಯಕ್ಷತೆಯನ್ನು ಸಂಸತ್ತಿನ ಮಾಜಿ ಸದಸ್ಯ ಸಿ. ಆರ್. ಬಸಪ್ಪ ವಹಿಸಿದ್ದರು. ●

1980ರ ಲೋಕಸಭಾ ಚುನಾವಣೆಯಲ್ಲಿ ಜನಸಂಘದ ಘೋರ ಪರಾಜಯ

1977ರ ಜನತಾಗಾಳಿಯಲ್ಲಿ ಜನತಾಪಕ್ಷದ ಅಂಗಪಕ್ಷವಾಗಿದ್ದ ಜನಸಂಘ 93 ಸ್ಥಾನಗಳನ್ನು ಪಡೆದಿತ್ತು. ತನ್ನ ಸಂಖ್ಯಾ ಬಲದ ಆಧಾರದಿಂದ ಮಾಜಿ ಪ್ರಧಾನಿ ಮೊರಾರ್ಜಿ ದೇಸಾಯಿಯವರನ್ನು ತಮ್ಮ ಹಿಡಿತದಲ್ಲಿಟ್ಟುಕೊಂಡಿದ್ದರು. ಜನಸಂಘದ ಬಾಲವಾದ ಆರೆಸ್ಸೆಸ್‌ನ ಅತಿಕ್ರಮಣ ಚಟುವಟಿಕೆಗಳಿಂದ ಕೊನೆಗೆ ಜನತಾಪಕ್ಷ ಕೇವಲ ಮುವತ್ತು ತಿಂಗಳಲ್ಲಿ ಅಧಿಕಾರ ಕಳೆದುಕೊಂಡಿದ್ದಲ್ಲದೆ 1980ರ ಲೋಕಸಭಾ ಚುನಾವಣೆಗಳಲ್ಲಿ ಬರೀ 31 ಸ್ಥಾನಗಳನ್ನು ಪಡೆಯಿತು. ಜನಸಂಘಕ್ಕೆ ನಿಷ್ಠೆಯಿರುವ ಹದಿನೈದು ಜನರು ಜನತಾ ಪಕ್ಷದ ಅಭ್ಯರ್ಥಿಗಳಾಗಿ ಆಯ್ಕೆಯಾಗಿದ್ದಾರೆ.

ದೇಶದ ಸಧ್ಯದ ರಾಜಕೀಯ ಪರಿಸ್ಥಿತಿಯಲ್ಲಿ ಕಾರ್ಯಕರ್ತರು ಹಾಗೂ ಸೈದ್ಧಾಂತಿಕ ದೃಷ್ಟಿಕೋನಗಳುಳ್ಳ ಸಿ ಪಿ ಐ(ಎಂ) ಮತ್ತು ಜನಸಂಘಗಳು ಮಾತ್ರ ಇಂದಿರಾಗಾಳಿಯನ್ನು ತಡೆಯಲು ಸಾಧ್ಯವೆಂದು ಕೆಲವು ರಾಜಕೀಯ ವೀಕ್ಷಕರ ಅಭಿಪ್ರಾಯವಾಗಿತ್ತು. ಈಗ ಎಲ್ಲರ ಅಭಿಪ್ರಾಯಗಳೂ ತಿರುಗು, ಮುರುಗಾಗಿದೆ.

ಇಡೀ ದೇಶದಲ್ಲಿ ಉಳಿದೆಲ್ಲಾ ವಿರೋಧ ಪಕ್ಷಗಳು ಸೋಲನ್ನು ಅನುಭವಿಸಿದರೂ, ಸಿ ಪಿ ಐ(ಎಂ) ಮಾತ್ರ ತನ್ನ ಪ್ರಭಾವೀ ಕ್ಷೇತ್ರಗಳಾದ ಕೇರಳ, ಪಶ್ಚಿಮ ಬಂಗಾಳ, ತ್ರಿಪುರಾ ರಾಜ್ಯಗಳಲ್ಲಿ ಪ್ರಚಂಡ ಜಯಭೇರಿ ಭಾರಿಸಿ, ಜನತೆಯ ಮಧ್ಯೆ ಮತ್ತಷ್ಟು ಬಲಿಷ್ಠವಾಗಿರುವುದನ್ನು ತೋರಿಸಿದೆ. ಅದೇ ವೇಳೆ ಇತರೆ ಎಡಪಕ್ಷಗಳ ಸಹಕಾರದಿಂದ ಇಂದಿರಾಗಾಳಿಯನ್ನು ಸಂಪೂರ್ಣವಾಗಿ ತಡೆಯಲು ಶಕ್ತವಾಗಿದೆ. ಆದರೆ, ಮಧ್ಯಪ್ರದೇಶ, ರಾಜಾಸ್ಥಾನ ದೆಹಲಿ, ಸ್ವಲ್ಪಕಾಲ ಉತ್ತರ ಪ್ರದೇಶ ಬಿಹಾರ್ ರಾಜ್ಯಗಳಲ್ಲಿ ಶಕ್ತಿಯನ್ನು ಹೊಂದಿದ್ದ ಜನಸಂಘ 1980ರ ಚುನಾವಣೆಯಲ್ಲಿ ಜನತಾ ಪಕ್ಷ, ಜಗಜೀವನ ರಾಮ್‌ರವರನ್ನು ಮುಂದಿಟ್ಟುಕೊಂಡು ಹೋದರೂ, ಸಂಪೂರ್ಣ ಪರಾಜಯ ಹೊಂದಿದೆ. ಜಗಜೀವನರಾಮ್ ನಾಮದ ಬಲದಿಂದ ಹರಿಜನರ ಓಟು ಪಡೆಯಬಹುದೆಂದು ಧಾವಿಸಿದ್ದ ಜನಸಂಘಕ್ಕೆ ತನ್ನ ತಂತ್ರ ತಿರುಗುಬಾಣವಾಗಿದೆ.

ಜನಸಂಘೀ ಮುಖ್ಯಮಂತ್ರಿಗಳಿದ್ದ ರಾಜಸ್ಥಾನ, ಮಧ್ಯಪ್ರದೇಶಗಳಲ್ಲಿ ಅದಕ್ಕೆ ನಾಲ್ಕು ಸ್ಥಾನಗಳು ಮಾತ್ರ ಲಭ್ಯವಾಗಿವೆ. ಉತ್ತರ ಪ್ರದೇಶ, ಮಹಾರಾಷ್ಟ್ರ, ದೆಹಲಿ, ಹರಿಯಾಣಗಳಿಂದ ತಲಾ ಒಂದು ಸ್ಥಾನಗಳನ್ನು ಪಡೆದಿದೆ. ಬಿಹಾರ ರಾಜ್ಯದಲ್ಲಿ ಮೂರು ಸ್ಥಾನಗಳನ್ನು ಗಳಿಸಿದೆ.

ಜನಸಂಘಕ್ಕೇ ಹಿಂದಿನ ಲೋಕಸಭೆಗಳಲ್ಲಿದ್ದ ಸದಸ್ಯರ ಬಲ ಈ ರೀತಿ ಇದೆ:

1952	3
1957	4
1962	14
1967	35
1971	22
1977	93
1980	15

—ಸಿ.ವಿ.ಎ. ನಾಯಕ್

●

ಯುವಕ ಸಮಿತಿ ರಚನೆ

ದ. ಕ. ಜಿಲ್ಲೆಯ ಕುಂದಾಪುರ ತಾಲ್ಲೂಕಿನ ಮೂಡೂರು 'ಗ್ರಾಮದಲ್ಲಿ ಫೆ 19ರಂದು ಯುವಕ ಸಮಿತಿ ರಚಿತವಾಯಿತು. ಸಮಿತಿಯ ಅಧ್ಯಕ್ಷರಾಗಿ ಕೆ. ಸದಾನಂದನ್, ಉಪಾಧ್ಯಕ್ಷರಾಗಿ ಬಚ್ಚ. ಕಾರ್ಯದರ್ಶಿಯಾಗಿ ಎಚ್. ಎಸ್, ರಾಮು, ಸಹಕಾರ್ಯದರ್ಶಿಯಾಗಿ ಲಿಂಗಪ್ಪ ಮತ್ತು ಕಾರ್ಯಕಾರಿ ಸದಸ್ಯರುಗಳಾಗಿ ಸಿದ್ದ, ಅಂಬ್ಲಾಜಿ, ವಾಸುದೇವನ್, ಸುರೇಶ್, ಸ್ಕರಿಯ ಕೆ. ಸಿ. ಪಾಲೋಸ್ ಮತ್ತು ನಾರಾಯಣ ಅವರು ನೇಮಕಗೊಂಡರು.

ಪ್ರಥಮ ಸಭೆಯ ಅಧ್ಯಕ್ಷತೆಯನ್ನು ಸ್ಥಳೀಯ ರೈತ ಕಾರ್ಮಿಕರ ಮುಖಂಡ ಕಾಂ. ಸಿ ನಾರಾಯಣ ವಹಿಸಿದ್ದರು. ಎಸ್. ಎಫ್. ಐ. ನ ಕುಂದಾಪುರ ತಾಲ್ಲೂಕು ಕಾರ್ಯದರ್ಶಿ ಕಾಂ. ಆರ್, ಜಯಕುಮಾರ್ ಅವರು ಯುವಕ ಸಂಘದ ಮಹತ್ವ ಕುರಿತು ಮಾತನಾಡಿದರು. ○

ಆರ್ಥಿಕ ಸಮೀಕ್ಷೆ :

ಕಾರ್ಮಿಕರನ್ನು ಹದ್ದುಬಸ್ತಿನಲ್ಲಿಡಲು ಕೈಗಾರಿಕೋದ್ಯಮಿಗಳ ಒತ್ತಾಯ

ಆರ್. ಚಂದ್ರ

ಜೂನ್ 1975ರಲ್ಲಿ ದೇಶದಲ್ಲಿ ಆಂತರಿಕ ತುರ್ತು ಪರಿಸ್ಥಿತಿಯನ್ನು ಜ್ಯಾರಿಗೊಳಿಸಿದಾಗ, ಬಿರ್ಲಾ ನೇತೃತ್ವದಲ್ಲಿ ಕೈಗಾರಿಕೋದ್ಯಮಿಗಳು ಇಂದಿರಾ ಗಾಂಧಿಯ ಮನೆಯವರೆಗೆ ಮೆರವಣಿಗೆಯಲ್ಲಿ ಹೋಗಿ ಸರಕಾರಕ್ಕೆ ತಮ್ಮ ಸಂಪೂರ್ಣ ಬೆಂಬಲವನ್ನು ವ್ಯಕ್ತಪಡಿಸಿದ್ದು ಎಲ್ಲರಿಗೂ ತಿಳಿದಿದೆ. ತುರ್ತು ಪರಿಸ್ಥಿತಿಯ ಅವಧಿಯಲ್ಲಿ ಹಣದುಬ್ಬರ ಹಾಗೂ ಆರ್ಥಿಕ ಹಿಂಜರಿತದ ಎಲ್ಲಾ ಕಷ್ಟನಿಷ್ಟಗಳನ್ನು ಕಾರ್ಮಿಕರ ಹೆಗಲ ಮೇಲೆ ಹೇರಿ ಗುತ್ತೇದಾರಿ ಕೈಗಾರಿಕಾ ಕುಟುಂಬಗಳು ತಮ್ಮ ಆಸ್ತಿ ಆದಾಯಗಳನ್ನು ಹಬ್ಬಿಕೊಂಡಿದ್ದವು. ದೇಶದಲ್ಲಿ ಪುನಃ ಭೀಕರವಾದ ಹಣದುಬ್ಬರ ಮತ್ತು ಆರ್ಥಿಕ ಹಿಂಜರಿತ ಮರುಕಳಿಸುತ್ತಿರುವಾಗ, ಕಾರ್ಮಿಕರು ತಮ್ಮ ವೇತನ ಮತ್ತು ಜೀವನ ಮಟ್ಟವನ್ನು ರಕ್ಷಿಸಿಕೊಳ್ಳಲು ಹೆಣಗಾಡುತ್ತಿರುವಾಗ, 1980ರ ಲೋಕಸಭೆಯಲ್ಲಿ ಇಂದಿರಾ ಕಾಂಗ್ರೆಸ್ 2/3ರಷ್ಟು ಸ್ಥಾನಗಳನ್ನು ಗಳಿಸಿ ಮತ್ತೆ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದಿರುವುದು ಕೈಗಾರಿಕೋದ್ಯಮಿಗಳಿಗೆ ಎಲ್ಲಿಲ್ಲದಷ್ಟು ಸಂತೋಷ. ಇಂದಿರಾ ಕಾಂಗ್ರೆಸ್‌ನ ಗೆಲುವು ತಮ್ಮ ಗೆಲುವೆಂದು ಅವರು ಭಾವಿಸಿದ್ದರು. ಕಾರಣ, ಅದಕ್ಕಾಗಿ ಅವರು ಸಾಕಷ್ಟು ಸಹಾಯ ಸಹಕಾರ ನೀಡಿದ್ದಾರೆ. ಈಗ ಸಹಜವಾಗಿಯೇ ಅವರು ತಮ್ಮ ಹೊಸ ಸರಕಾರದಿಂದ ಭಾರೀ ನಿರೀಕ್ಷೆಯಲ್ಲಿದ್ದಾರೆ!

ಈ ಸಲದ ಚುನಾವಣೆಯಲ್ಲಿ ಇಂದಿರಾ ಕಾಂಗ್ರೆಸ್ 'ಸಮಾಜವಾದ', 'ಬಡತನ ನಿರ್ಮೂಲನ', ಇತ್ಯಾದಿ ಘೋಷಣೆಗಳಿಗೆ ಹೆಚ್ಚು ಗಮನಕೊಡಲಿಲ್ಲ. 'ಭದ್ರ ಸರಕಾರ' ನೀಡುವುದಾಗಿಯೂ, 'ಕಾನೂನು ಶಿಸ್ತು' ಪಾಲಿಸುವುದಾಗಿಯೂ, ಭರವಸೆ ಕೊಟ್ಟಿತ್ತು. ಆದುದರಿಂದಲೇ, ಕೈಗಾರಿಕೋದ್ಯಮಿಗಳು ಚುನಾವಣೆ ಮುಗಿದು ಹೊಸ ಸರಕಾರ ಅಧಿಕಾರಕ್ಕೆ ಬಂದೊಡನೆಯೇ ತಡಮಾಡದೆ ತಮ್ಮ ಭಾರೀ ಬೇಡಿಕೆಗಳನ್ನು ಧೈರ್ಯವಾಗಿ ಮುಂದೊಡ್ಡಿವೆ.

AIOEಯ ಬೇಡಿಕೆಗಳು :

ಆಲ್ ಇಂಡಿಯಾ ಆರ್ಗನೈಜೇಶನ್ ಆಫ್ ಎಂಪ್ಲಾಯರ್ಸ್ (AIOE) ಎಂಬ ಕೈಗಾರಿಕೋದ್ಯಮಿಗಳ ಸಂಘವು ಸರಕಾರಕ್ಕೆ ಇತ್ತೀಚೆಗೆ ಸಲ್ಲಿಸಿದ ಮನವಿಯಲ್ಲಿ ಕೈಗಾರಿಕಾ ಸಂಬಂಧಗಳನ್ನು ಸುಧಾರಿಸಲು ಈ ಕೆಳಗಿನ ಸಲಹೆಗಳನ್ನು ನೀಡಿದೆ. ಕೈಗಾರಿಕಾ ಕೇಂದ್ರಗಳಲ್ಲಿ ಕಾನೂನು ಶಿಸ್ತು ಪಾಲಿಸುವುದು; ಕಾನೂನು ಬಾಹಿರ ಮುಷ್ಕರಗಳನ್ನು ನಿಶೇಧಿಸುವುದು ಮತ್ತು ಅವುಗಳಲ್ಲಿ ಭಾಗವಹಿಸಿದವರಿಗೆ ಜೈಲು ಶಿಕ್ಷೆ ವಿಧಿಸುವುದು; ಹಿಂಸಾಕೃತ್ಯ ಮತ್ತು ವಿಧ್ವಂಸಕೃತ್ಯಗಳಲ್ಲಿ ತೊಡಗುವವರಿಗೆ ಕಠಿಣಶಿಕ್ಷೆ ವಿಧಿಸುವುದು, ಕೆಲಸದಿಂದ ತೆಗೆದು ಹಾಕಿದವರನ್ನು ಪುನಃ ಸೇರಿಸಿಕೊಳ್ಳಬೇಕಾದರೆ ಮಾಲೀಕರಿಗೆ ಯೋಗ್ಯ ಪರಿಹಾರ ನೀಡುವುದು (!): ಕೈಗಾರಿಕಾ ಸಂಸ್ಥೆಗಳಲ್ಲಿ ವೇತನ ಮಟ್ಟದಲ್ಲಿ ಈ ಅನುಕೂಲತೆ ಕಡಿಮೆಯಾಗುವಂತೆ, ಉತ್ಪಾದನೆ ಮತ್ತು ಉತ್ಪಾದನೆಯ ಗತಿ ವೃದ್ಧಿಯಾಗುವಂತೆ, ಅವುಗಳು ಕೊಡುವ ಶಕ್ತಿಗನುಗುಣ ಕಾರ್ಮಿಕರ ವೇತನ, ಬೋನಸ್, ಇತ್ಯಾದಿಗಳನ್ನು ನಿರ್ಣಯಿಸುವುದು; ಕಾರ್ಮಿಕರ ವಿವಾದಗಳನ್ನು ನ್ಯಾಯಾಂಗ ವಿಚಾರಣೆಗೆ ಕಡ್ಡಾಯವಾಗಿ ಹಾಕುವುದು; ಕಾರ್ಮಿಕ ಸಂಘಗಳಿಗೆ ಅವುಗಳ ಸದಸ್ಯತ್ವದ ಮೇರೆಗೆ ಮಾನ್ಯತೆ ನೀಡುವುದು ಮತ್ತು ಸದಸ್ಯತ್ವದಲ್ಲಿ ಅಂತರ ಕಡಿಮೆ ಇದ್ದರೆ ಗುಪ್ತ ಮತದಾನದ ಮೂಲಕ ಹಲವು ಸಂಘಗಳಲ್ಲಿ ಯಾವುದಕ್ಕೆ ಮಾನ್ಯತೆ ಕೊಡುವುದೆಂದು ನಿರ್ಧರಿಸುವುದು; ಇತ್ಯಾದಿ ವಿಷಯಗಳನ್ನೊಳಗೊಂಡು ವ್ಯಾಪಕವಾದ ಕೈಗಾರಿಕಾ ಸಂಬಂಧಗಳ ಕುರಿತಾದ ಶಾಸನ ಜ್ಯಾರಿಗೆ ತರುವುದು ಮತ್ತು ಕಾರ್ಮಿಕ ಶಾಸನಗಳನ್ನು ತಿದ್ದುಪಡಿ ಮಾಡುವುದು.

ಒಟ್ಟಿನಲ್ಲಿ ಕಾರ್ಮಿಕರ ಸಂಘಟನೆಯ, ಮುಷ್ಕರದ, ಚೌಕಾಸಿಯ ಹಾಗೂ ಮತ್ತಿತರ ಹಕ್ಕುಗಳನ್ನು ಮೊಟಕುಗೊಳಿಸಿ ಜನತಾ ಸರಕಾರವು ಸೂಚಿಸಿದ ಕೈಗಾರಿಕಾ ಸಂಬಂಧಗಳ ಮಸೂದೆಯನ್ನೇ ಇನ್ನಷ್ಟು ಮಾಲಕರ ಪರವಾಗಿಯೇ ತಿದ್ದುಪಡಿ ಶಾಸನ ರಚಿಸಬೇಕೆಂಬುದೇ ಕೈಗಾರಿಕೋದ್ಯಮಿಗಳ ಈ ಸಂಘದ ಸಲಹೆ.

Ficciಯ ಬೇಡಿಕೆಗಳು :

ಫೆಡರೇಶನ್ ಆಫ್ ಇಂಡಿಯನ್ ಚೇಂಬರ್ ಆಫ್ ಕಾಮರ್ಸ್ ಎಂಡ್ ಇಂಡಸ್ಟ್ರೀಸ್ (Ficci) ಎಂಬ ಕೈಗಾರಿಕೋದ್ಯಮಿಗಳ ಹಾಗೂ ವ್ಯಾಪಾರಸ್ಥರ ಇನ್ನೊಂದು ಮಹಾ ಸಂಘವು ಇಂದಿರಾ ಸರಕಾರಕ್ಕೆ ತಾ. 13-1-80 ರಂದು ಸಲ್ಲಿಸಿದ ಮನವಿಯಲ್ಲಿ ಈ ಕೆಳಗಿನ ಕ್ರಾಂತಿಕಾರಕ (!) ಬೇಡಿಕೆಗಳಿವೆ.

* ಕಾರ್ಮಿಕರ ಅಶಿಸ್ತು, ಮುಷ್ಕರ, ಹೋರಾಟಗಳಿಂದ ಆರ್ಥಿಕ ವ್ಯವಸ್ಥೆ ಹದಗೆಟ್ಟಿದೆ, ಉತ್ಪಾದನೆ ಸ್ಥಗಿತಗೊಂಡಿದೆ, ಹಣದುಬ್ಬರ ತಲೆದೋರಿದೆ. ದೇಶದ ಆರ್ಥಿಕ ವ್ಯವಸ್ಥೆಯನ್ನು ಸಧ್ಯದ ದುಃಸ್ಥಿತಿಯಿಂದ ಪಾರುಮಾಡಲು ಹೊಸ ಸರಕಾರ ಮೊದಲು ಕಾರ್ಮಿಕರನ್ನು ಹದ್ದುಬಸ್ತಿನಲ್ಲಿಡಬೇಕು. ಅವರ ವೇತನವೂ ಮತ್ತಿತರ ಸೌಕರ್ಯ, ಸೌಲಭ್ಯಗಳೂ ಬೆಲೆಏರಿಕೆ ಹಾಗೂ ಉತ್ಪಾದನಾಗತಿಯ ಏರಿಕೆಗಿಂತ ಹೆಚ್ಚಾಗದಂತೆ ನೋಡಿಕೊಳ್ಳಬೇಕು.

ಬೋನಸ್ ಕಾಯಿದೆ ಬದಲಾಯಿಸಬೇಕು. ಬೋನಸ್ ಲಾಭ ಇದ್ದರೆ ಮಾತ್ರ, ಮುಂದೂಡಿದ ವೇತನ ಎಂದು ತಿಳಿಯಕೂಡದು, ಕಾನೂನು ಬಾಹಿರ ಮುಷ್ಕರ ಮತ್ತು ಲಾಕ್‌ಔಟ್ ನಿಧಾನ ಕೆಲಸ, ಅಸಹಕಾರ, ಘೇರಾವೋ, ಇತ್ಯಾದಿಗಳ ವಿರುದ್ಧ ಕಠಿಣ ಕ್ರಮ ಕೈಕೊಳ್ಳಬೇಕು.

* ಸಾರ್ವಜನಿಕ ಕ್ಷೇತ್ರವು ಆರ್ಥಿಕ ರಂಗದಲ್ಲಿ ಆದ್ಯತೆ ಪಡೆಯುವುದನ್ನು ತಡೆಯಬೇಕು. ಆರ್ಥಿಕ ಶಕ್ತಿಯು ಸರಕಾರದಲ್ಲಿ ಕೇಂದ್ರೀಕೃತವಾಗಿರಬಾರದು. ಸಾರ್ವಜನಿಕ ಮತ್ತು ಖಾಸಗೀ ಕ್ಷೇತ್ರದ ಕೈಗಾರಿಕೆಗಳೊಳಗೆ ಪೈಪೋಟಿಯಿರಬೇಕು, ಆಗ ಎರಡೂ ಕ್ಷೇತ್ರಗಳಲ್ಲಿ ಧಕ್ಷತೆ ಹೆಚ್ಚುವುದು. ಆದುದರಿಂದ, ಖಾಸಗೀ ಕ್ಷೇತ್ರಕ್ಕೆ ಕಲ್ಲಿದ್ದಲು, ಉಕ್ಕು, ವಿದ್ಯುತ್ ಉತ್ಪಾದನೆ, ಮುಂತಾದ ಕೈಗಾರಿಕೆಗಳೂ ಸೇರಿ ಎಲ್ಲಾ ಕೈಗಾರಿಕೆಗಳಲ್ಲಿ ಭಾಗವಹಿಸಲು ಅವಕಾಶ ಕೊಡಬೇಕು. ಸಾರ್ವಜನಿಕ ಕ್ಷೇತ್ರದ ಕೈಗಾರಿಕಾ ಸಂಸ್ಥೆಗಳಲ್ಲಿ ಕೆಲಸವನ್ನು ಖಾಸಗೀ ಕ್ಷೇತ್ರದ ಆಡಳಿತಕ್ಕೆ ಬಿಟ್ಟು ಕೊಡಬೇಕು. ಸಾರ್ವಜನಿಕ ಕೈಗಾರಿಕೆಗಳ ಸ್ವಲ್ಪಾಂಶ ಷೇರು(ಬಂಡವಾಳ)ಗಳನ್ನು ಖಾಸಗೀ ಕ್ಷೇತ್ರದವರಿಗೆ ಬಿಟ್ಟು ಕೊಡಬೇಕು. ಸಾರ್ವಜನಿಕ ಕ್ಷೇತ್ರದ ಕೈಗಾರಿಕಾ ಸಂಸ್ಥೆಗಳಿಗೆ ಸಂಪೂರ್ಣ ಸ್ವಾಯತ್ತತೆ ನೀಡಬೇಕು ಮತ್ತು ಅವುಗಳ ಆಡಳಿತದಲ್ಲಿ ಸರಕಾರದ ಪ್ರತಿನಿಧಿಗಳಲ್ಲದೆ ಖಾಸಗೀ ಕ್ಷೇತ್ರದ ಪ್ರತಿನಿಧಿಗಳೂ ಇರಬೇಕು.

* ರಕ್ಷಣಾ ಕೈಗಾರಿಕೆಗಳನ್ನು ಸರಕಾರಕ್ಕೆ ಮೀಸಲಾಗಿರಿಸಿ, ಕೆಲವು ಸಣ್ಣ ಕೈಗಾರಿಕೆಗಳನ್ನು 'ಸಣ್ಣ ಕೈಗಾರಿಕಾ ಕ್ಷೇತ್ರ'ಕ್ಕೆ ಮೀಸಲಾಗಿರಿಸಿ, ಉಳಿದ ಎಲ್ಲಾ ಕೈಗಾರಿಕೆಗಳಲ್ಲಿ ಖಾಸಗೀ ರಂಗವು ಭಾಗವಹಿಸುವಂತಾಗಬೇಕು. ಸಧ್ಯದ ಲ್ಯಾಸನ್ಸ್ ಪದ್ಧತಿಯನ್ನು ರದ್ದುಗೊಳಿಸಬೇಕು. ಗುತ್ತೇದಾರಿ ಕೈಗಾರಿಕಾ ಸಂಸ್ಥೆಗಳ ಮೇಲಿನ ಎಲ್ಲಾ ನಿಯಂತ್ರಣಗಳನ್ನು ತೆಗೆದುಹಾಕಬೇಕು.

* ಕಂಪೆನಿ ತೆರಿಗೆಗಳನ್ನು ಶೇ. 50 ರಷ್ಟು ಕಡಿಮೆ ಮಾಡಬೇಕು. ವೈಯಕ್ತಿಕ ಆದಾಯ ತೆರಿಗೆಯನ್ನು ಸಧ್ಯದ 87ರಷ್ಟು ಗರಿಷ್ಟ ದರದಿಂದ ಶೇ. 60 ಗರಿಷ್ಟ ದರಕ್ಕಿಳಿಸಬೇಕು. ಸುಲಭ ಆಮದು ನೀತಿ ಇರಬೇಕು ಮತ್ತು ರಫ್ತು ವ್ಯಾಪಾರಕ್ಕೆ ಸರಕಾರಪ್ರೋತ್ಸಾಹ ಕೊಡಬೇಕು,

ನಗ್ನ ಬಂಡವಾಳಶಾಹಿ ಪದ್ಧತಿಯ ಮುನ್ನಡೆ :

ಕೈಗಾರಿಕೋದ್ಯಮಿಗಳ ಮತ್ತು ವ್ಯಾಪಾರಸ್ಥರ ಈ ಮಹಾಸಂಘವು ತನ್ನ ಧೋರಣೆಯ ಬಗ್ಗೆ, ಬೇಡಿಕೆಗಳ ಬಗ್ಗೆ ಯಾವ ಮುಚ್ಚುಮರೆಯನ್ನೂ ಮಾಡಲಿಲ್ಲ. ಖಾಸಗೀ ರಂಗಕ್ಕೆ, ಮುಖ್ಯವಾಗಿ ಗುತ್ತೇದಾರಿ ಕೈಗಾರಿಕಾ ಕುಟುಂಬಗಳಿಗೆ ಅನಿರ್ಬಂಧಿತ ಅಭಿವೃದ್ಧಿಗೆ ಅವಕಾಶ ಕೊಡಬೇಕು, ಅವುಗಳ ಮತ್ತು ಅವುಗಳನ್ನು ಬೆಂಬಲಿಸುವ ಶ್ರೀಮಂತ ವರ್ಗದ ಕರಭಾರ ಕಡಿಮೆ ಮಾಡಬೇಕು, ಸಾರ್ವಜನಿಕ ಕ್ಷೇತ್ರದ ಕಾರ್ಯವ್ಯಾಪ್ತಿ ಕಡಿಮೆಯಾಗಬೇಕು, ಮತ್ತು ಖಾಸಗೀ ರಂಗಕ್ಕೆ ಅಗತ್ಯವಾದ ಆಮದು ಧೋರಣೆ ರೂಪಿಸಬೇಕು ಹಾಗೂ ಆಂತರಿಕ ಮಾರುಕಟ್ಟೆಯನ್ನು ಕಳೆದುಕೊಳ್ಳುತ್ತಿರುವಾಗ ರಫ್ತು ವ್ಯಾಪಾರಕ್ಕೆ ಹೆಚ್ಚಿನ ಅವಕಾಶ ನೀಡಬೇಕು, ಇಂತಹ ನಗ್ನ, ಮುಕ್ತ, 'ಬಂಡವಾಳಶಾಹಿ' ಪದ್ಧತಿಯ ಆರ್ಥಿಕ ಅಭಿವೃದ್ಧಿಯ ಎಲ್ಲಾ ಕಷ್ಟನಷ್ಟಗಳನ್ನು ಕಾರ್ಮಿಕರ ಹೆಗಲ ಮೇಲೆ ಹೇರಲು ಸರಕಾರ ಕಾರ್ಮಿಕರ ವೇತನ ಸ್ಥಗಿತಗೊಳಿಸಬೇಕು, ಸಾಧ್ಯವಾದರೆ ಅವರ ವೇತನ ಕಡಿತಮಾಡಬೇಕು ಮತ್ತು ಅವರು ತಮ್ಮ ಪ್ರತಿಭಟನೆಯ ಉಸಿರೆತ್ತದಂತೆ ಸರಕಾರ ಅವರನ್ನು ಹದ್ದುಬಸ್ತಿನಲ್ಲಿಡಬೇಕು, ಶಿಸ್ತು ಪಾಲನೆ ಮಾಡಬೇಕು!

ಭಾರತದ ಬಂಡವಾಳಶಾಹಿಗಳು ಈಗ ಬಹಳ ಧೈರ್ಯಸ್ಥರಾಗಿದ್ದಾರೆ! ಅವರು ಬಯಸಿದ ಪಕ್ಷವು ಇಂದು ಕೇಂದ್ರದಲ್ಲಿ ಅಧಿಕಾರಕ್ಕೆ ಬಂದಿರುವುದರಿಂದ ತೋರಿಕೆಯ 'ಪ್ರಜಾಪ್ರಭುತ್ವ', 'ಸಮಾಜವಾದ', 'ಪಂಚವಾರ್ಷಿಕ ಯೋಜನೆ', 'ಸಾರ್ವಜನಿಕ ಕ್ಷೇತ್ರದ ಮೇಲ್ಮೈ', ಇತ್ಯಾದಿಗಳು ಇಂದು ಅವರಿಗೆ ಬೇಕಾಗಿಲ್ಲ. ಅವರ ಆಸ್ತಿ ಆದಾಯಗಳನ್ನು ಹೆಚ್ಚಿಸಿಕೊಳ್ಳಲು ಅವರಿಗೆ ಬೇಕಾದುದು ಸ್ವಚ್ಛಂದ ಅವಕಾಶಗಳು, ವಿದೇಶಿ ಬಂಡವಾಳದೊಡನೆ ನಿಕಟ ಸಂಬಂಧ ಸಹಕಾರಗಳು. ಅವರು ಸರಕಾರದಿಂದ ನಿರೀಕ್ಷಿಸುವುದು ಆಂತರಿಕ ಶಿಸ್ತು ಪಾಲನೆ, ಕಾರ್ಮಿಕರನ್ನು ಹದ್ದುಬಸ್ತಿನಲ್ಲಿಡುವುದು, ವಿದೇಶಿ ಆಕ್ರಮಣವನ್ನು ತಡೆಯುವುದು, ಅಷ್ಟೆ. ಈ ವಾದವನ್ನು ತುರ್ತುಪರಿಸ್ಥಿತಿಯಲ್ಲಿ ಸಂಜಯಗಾಂಧಿ ದುಷ್ಟಕೂಟವು ಸಮರ್ಥಿಸುತ್ತಿದ್ದುದನ್ನು ಇಲ್ಲಿ ನೆನಪು ಮಾಡಿಕೊಳ್ಳಬಹುದು. ಈಗ ಅಧಿಕಾರಕ್ಕೆ ಬಂದ ಇಂದಿರಾ ಕಾಂಗ್ರೆಸ್‌ನ ಅಧಿಕಾರ ಕೇಂದ್ರ ದುಷ್ಟಕೂಟದ ಸುತ್ತಲೂ ಇರುವುದರಿಂದಲೇ, ದೇಶದ ಬಂಡವಾಳಗಾರರು, ಗುತ್ತೇದಾರಿ ಕೈಗಾರಿಕಾ ಕುಟುಂಬಗಳು ತಮ್ಮ ಆಸೆ ಆಕಾಂಕ್ಷೆಗಳನ್ನು, ದೇಶದ ಮುಂದಿನ ಆರ್ಥಿಕ ವ್ಯವಸ್ಥೆಯ ಬದಲಾವಣೆಯನ್ನು ಮುಚ್ಚುಮರೆಯಿಲ್ಲದೆ ಸರಕಾರದ ಮುಂದಿಡಲು ಧೈರ್ಯ ಹೊಂದಿದ್ದಾರೆ. ಇದು ಕಾರ್ಮಿಕರಿಗೊಂದು ಎಚ್ಚರ!

ಮುಷ್ಕರಗಳೇಕೆ ? :

ಕಾರ್ಮಿಕರು ಮುಷ್ಕರ ಹೋರಾಟಗಳಿಂದ ತಮಗೆ ಅಪಾರ ಕಷ್ಟನಷ್ಟಗಳೆಂದು ತಿಳಿದಿದ್ದರೂ, ಅಂತಹ ಸಂಘರ್ಷದ ದಾರಿಯನ್ನೇ ಯಾಕೆ ಪುನಃ ಪುನಃ ಅನುಸರಿಸುತ್ತಾರೆ? ಉತ್ಪಾದನಾ ಮಾಧ್ಯಮಗಳು ಬಂಡವಾಳಗಾರರ ಸ್ವಾಮ್ಯದಲ್ಲಿರುವುದರಿಂದ, ಆರ್ಥಿಕ, ಸಾಮಾಜಿಕ ಹಾಗೂ ರಾಜಕೀಯ ಮಟ್ಟದಲ್ಲಿ ಕಾರ್ಮಿಕರು ಬಂಡವಾಳಗಾರರಿಗೆ ಅಸಮಾನರಾಗಿರುವುದರಿಂದ ಅವರು ತಮ್ಮ ಶ್ರಮಕ್ಕನುಗುಣವಾಗಿ ತಮ್ಮ ಉತ್ಪಾದನೆಯಲ್ಲಿಯೇ ನ್ಯಾಯ ಪಾಲು ಪಡೆಯಲು ಅಸಮರ್ಥರಾಗಿರುವರು. ಬಂಡವಾಳಶಾಹಿ ಪದ್ಧತಿಯಲ್ಲಿ ಸರಕಾರವೂ ಅಂತಿಮವಾಗಿ ಸ್ವಾಮ್ಯವರ್ಗವನ್ನೇ ಬೆಂಬಲಿಸುವುದರಿಂದ ಕಾರ್ಮಿಕರ ವಿವಾದದಲ್ಲಿ ಸರಕಾರದ ಹಸ್ತಕ್ಷೇಪವೂ ಕಾರ್ಮಿಕರ ಪರವಾಗಿರುವುದಿಲ್ಲ. ಹೀಗಾಗಿ, ಅನಿವಾರ್ಯವಾಗಿ ಕಾರ್ಮಿಕರು ಬಂಡವಾಳಶಾಹಿ ಪದ್ಧತಿಯ ಅನಾಹುತಗಳಾದ ಹಣದುಬ್ಬರ, ನಿರುದ್ಯೋಗ, ಆರ್ಥಿಕ ಹಿಂಜರಿತ (ಮಾರುಕಟ್ಟೆ ಇಲ್ಲದೆ ಕಾರ್ಖಾನೆಗಳು ಮುಚ್ಚಲ್ಪಡುವುದು), ಇತ್ಯಾದಿಗಳಿಂದ ರಕ್ಷಿಸಿಕೊಳ್ಳಲು, ಮುಷ್ಕರ ಮತ್ತು ಹೋರಾಟಗಳ ಮಾರ್ಗವನ್ನು ಅನುಸರಿಸಬೇಕಾಗುವುದು. ಕಾರ್ಮಿಕರ ಈ ವರ್ಗ ಹೋರಾಟಗಳನ್ನು ಪ್ರತಿಯೊಂದು ಬಂಡವಾಳಶಾಹಿ ಸಮಾಜವೂ ಕಾನೂನು ಬಾಹಿರ, ಅಶಿಸ್ತು, ಧಂಗೆ, ಎಂದೇ ತಿಳಿಯುತ್ತದೆ ಮತ್ತು ಅಂತಹ ಹೋರಾಟಗಳನ್ನು ಹತ್ತಿಕ್ಕಲು, ಬಂಡವಾಳಗಾರರ ಆಸ್ತಿ ಆದಾಯಗಳನ್ನು ಹೆಚ್ಚಿಸಲು ತನ್ನ ಮಾರಕ ಉಪಕರಣಗಳನ್ನು ಸದಾ ಜಾಗೃತಾವಸ್ಥೆಯಲ್ಲಿಯೇ ಇಡುತ್ತದೆ. ನಮ್ಮ ದೇಶದಲ್ಲಿ ಸ್ವಾತಂತ್ರ್ಯಾನಂತರ ಬಂಡವಾಳಶಾಹಿ ಆರ್ಥಿಕ ಪದ್ಧತಿಯನ್ನೇ ಅನುಸರಿಸಿಕೊಂಡು ಬಂದುದರಿಂದ, ಕಾರ್ಮಿಕರ ಹೋರಾಟಗಳನ್ನು 'ಕಾರ್ಮಿಕ ಅಶಿಸ್ತು' ಎಂದು ಪರಿಗಣಿಸುತ್ತಿರುವುದರಲ್ಲಿ ಆಶ್ಚರ್ಯವೇನೂ ಇಲ್ಲ.

[7ನೇ ಪುಟ ನೋಡಿ]

ಭಾರತ ಉಪಖಂಡದಲ್ಲಿ ಅಮೆರಿಕದ ಕಾರ್ಯತಂತ್ರ

ಜನವರಿ 24, 1980 ರಂದು ರಾಜ್ಯಸಭೆಯಲ್ಲಿ "ಅಫ್‌ಘಾನಿಸ್ತಾನದಲ್ಲಿನ ಬೆಳವಣಿಗೆಗಳು ಮತ್ತು ಪಾಕಿಸ್ತಾನಕ್ಕೆ ಶಸ್ತ್ರಾಸ್ತ್ರಗಳ ಪೂರೈಕೆ" ಬಗ್ಗೆ ಮಂಡಿಸಲಾದ ಗಮನ ಸೆಳೆಯುವ ಸೂಚನೆ ಮೇಲೆ ನಡೆದ ಚರ್ಚೆಯಲ್ಲಿ ಭಾಗವಹಿಸುತ್ತಾ ಕಾಂ. ಹರ್‌ಕಿಶನ್ ಸಿಂಗ್ ಸುರ್ಜೀತ್ ಅವರು ಮಾಡಿದ ಭಾಷಣದ ಸಂಕ್ಷಿಪ್ತ ವರದಿ ಈ ರೀತಿಯಿದೆ.

ಈ ವಲಯದ ಶಾಂತಿ ಮತ್ತು ಭದ್ರತೆಯ ದೃಷ್ಟಿಯಿಂದ ಇಲ್ಲಿ ನಡೆಯುತ್ತಿರುವ ವಿದ್ಯಮಾನಗಳು ಮಹತ್ವಪೂರ್ಣವಾದುವು ಎಂಬುದನ್ನು ಎಲ್ಲರೂ ಒಪ್ಪುತ್ತಾರೆ. ಈ ಬೆಳವಣಿಗೆಗಳಿಗೆ ಯಾರು ಕಾರಣರು ಎಂಬ ಬಗ್ಗೆ ವಿಭಿನ್ನ ಅಭಿಪ್ರಾಯಗಳು ವ್ಯಕ್ತವಾಗಿವೆ. ಪ್ರಸ್ತುತ ಪರಿಸ್ಥಿತಿಗೆ ಸೋವಿಯತ್ ಒಕ್ಕೂಟವೇ ಮೂಲ ಕಾರಣವೆಂದು ಕೆಲವರ ಅಭಿಪ್ರಾಯ. ಇದು ಬರೇ ಅಮೆರಿಕ, ಬ್ರಿಟನ್ ಮತ್ತು ಪಾಕಿಸ್ತಾನಗಳಲ್ಲಿನ ವೃತ್ತಪತ್ರಿಕೆಗಳಲ್ಲಿ ನಡೆಯುತ್ತಿರುವ ಅಪಪ್ರಚಾರದ ಚರ್ವಿತಚರ್ವಣ. ಇನ್ನೂ ಕೆಲವರು ತಮ್ಮ ಅನುಭವದಿಂದ ನ್ಯಾಯವಾಗಿಯೇ, ಈ ವಲಯದಲ್ಲಿನ ಎಲ್ಲಾ ಬೆಳವಣಿಗೆಗಳಿಗೆ ಮತ್ತು ಪ್ರಸ್ತುತ ಪರಿಸ್ಥಿತಿಗೆ ಅಮೆರಿಕನ್ ಸಾಮ್ರಾಜ್ಯಶಾಹಿಗಳು ಮತ್ತು ಅವರ ನೀತಿಯೇ ಮೂಲಕಾರಣವೆಂಬ ಅಭಿಪ್ರಾಯ ತಳೆದಿದ್ದಾರೆ.

ಈ ವಲಯದಲ್ಲಿ ಅಮೆರಿಕನ್ ಸಾಮ್ರಾಜ್ಯಶಾಹಿಗಳ ಬಿರುಸಾದ ಚಟುವಟಿಕೆಗಳನ್ನು ನಾವೀಗ ಕಾಣುತ್ತಿದ್ದೇವೆ. ಇಲ್ಲಿಗೆ ವಿದೇಶಿ ರಾಜಕಾರಣಿಗಳು ಹೆಚ್ಚು ಹೆಚ್ಚಾಗಿ ಭೇಟಿ ನೀಡುತ್ತಿದ್ದಾರೆ. ಕೆಲವು ದಿನಗಳ ಹಿಂದೆಯಷ್ಟೆ ಬ್ರಿಟಿಷ್ ವಿದೇಶಾಂಗ ಕಾರ್ಯದರ್ಶಿ ಲಾರ್ಡ್ ಕ್ಯಾರಿಂಗ್ಟನ್ ಬಂಡುಕೋರರ ಪರವಾಗಿ ಮತ್ತು ಪಾಕಿಸ್ತಾನದ ಪರವಾಗಿ ವಾದಿಸುತ್ತಿದ್ದರು; ಅಫ್‌ಘಾನಿಸ್ತಾನದಲ್ಲಿರುವ ಬಂಡುಕೋರರ ಹೋರಾಟಕ್ಕೆ ಬೆಂಬಲ ನೀಡುವ ಸಲುವಾಗಿಯೇ ಪಾಕಿಸ್ತಾನವು ಇಸ್ಲಾಮಿಕ್ ರಾಷ್ಟ್ರಗಳ ಸಭೆಯನ್ನು ಕರೆದಿದೆ. ಈ ಸಭೆ ಕರೆಯುವುದಕ್ಕೆ ಸಿರಿಯಾ ಮತ್ತು ಪ್ಯಾಲಸ್ತೀನಿಯನ್ ಲಿಬರೇಶನ್ ಆರ್ಗನೈಸೇಶನ್‌ಗಳು ತಮ್ಮ ವಿರೋಧವನ್ನು ವ್ಯಕ್ತಪಡಿಸಿವೆ. ಅಲ್ಲದೆ ಈ ಸಭೆಯು ಸಾಮ್ರಾಜ್ಯಶಾಹಿಗಳ ವಿರುದ್ಧದ ಹೋರಾಟದಿಂದ ಗಮನವನ್ನು ಬೇರೆಡೆಗೆ ಸೆಳೆಯುವುದೆಂದೂ ಅವುಗಳು ವಾದಿಸಿವೆ. ಇಸ್ರೇಲಿನೊಂದಿಗೆ ರಾಯಭಾರಿ ಸಂಬಂಧಗಳನ್ನು ಸ್ಥಾಪಿಸಲು ಈಜಿಪ್ಟ್ ಹವಣಿಸುತ್ತಿದೆ. ಈ ಎಲ್ಲಾ ವಿಚಾರಗಳೂ ಪರಸ್ಪರ ಸಂಬಂಧಿಸಿದ್ದು ಹಲವಾರು ವರ್ಷಗಳಿಂದ ಈ ವಲಯದಲ್ಲಿ ನಡೆಯುತ್ತಿದ್ದ ವಿದ್ಯಮಾನಗಳಿಂದ ಅಫ್‌ಘಾನ್ ಬೆಳವಣಿಗೆಯನ್ನು ಪ್ರತ್ಯೇಕಿಸಲು ಸಾಧ್ಯವಿಲ್ಲ.

ಝಾರ್ ಸಾಮ್ರಾಜ್ಯಶಾಹಿ ರಶ್ಯಾ ಮತ್ತು ಸಮಾಜವಾದೀ ಸೋವಿಯತ್ ಒಕ್ಕೂಟಗಳಿಗಿರುವ ವ್ಯತ್ಯಾಸ ತಿಳಿಯದವರೊಡನೆ ವಾದಿಸುವುದು ವ್ಯರ್ಥ. ಸೋವಿಯತ್ ಒಕ್ಕೂಟ ಮತ್ತು ಭಾರತ ದೇಶಗಳ ನಡುವೆ ಪಾಕಿಸ್ತಾನದಂತಹ ಒಂದು ರಾಷ್ಟ್ರವಿದ್ದ ಬಳಿಕವೂ ಇನ್ನೊಂದು ಭೌಗೋಲಿಕ ತಡೆಯ ಅವಶ್ಯಕತೆಯಿಲ್ಲವೆಂಬ ಅಂಶವನ್ನು ಗಣನೆಗೆ ತೆಗೆದುಕೊಳ್ಳದವರೊಡನೆಯೂ ವಾದಿಸುವ ಅಗತ್ಯವಿಲ್ಲ. ನಾನು ಈ ಪ್ರಶ್ನೆಯ ಮೂಲವನ್ನು ಶೋಧಿಸಲು ಬಯಸುವುದಿಲ್ಲ. ಆದರೆ ಈ ವಲಯದಲ್ಲಿ ಯಾರೇನು ಮಾಡುತ್ತಿದ್ದಾರೆ ಎಂಬ ಬಗ್ಗೆ ಎಲ್ಲರ ಗಮನ ಸೆಳೆಯ ಬಯಸುತ್ತೇನೆ. ಸದ್ಯಕ್ಕೆ ಜಗತ್ತಿನ ಉಳಿದ ಭಾಗಗಳ ವಿಚಾರ ಒತ್ತಟ್ಟಿಗಿರಲಿ. ಯಾಕೆಂದರೆ ಅಲ್ಲಿ ಅಸ್ತಿತ್ವದಲ್ಲಿರುವ ಸರಕಾರಗಳನ್ನು ಉರುಳಿಸಲು ಪಿತೂರಿ ನಡೆಸುತ್ತಿರುವುದು ಸೋವಿಯತ್ ಒಕ್ಕೂಟವಲ್ಲವೆಂದು ಎಲ್ಲರಿಗೂ ತಿಳಿದಿದೆ. ಚಿಲಿಯಲ್ಲಿ ಯಾರೇನು ಮಾಡಿದರು ಮತ್ತು ಜಗತ್ತಿನ ವಿವಿಧ ರಾಷ್ಟ್ರಗಳಲ್ಲಿನ ಸರಕಾರಗಳನ್ನು ಉರುಳಿಸುವ ಪ್ರಯತ್ನದಲ್ಲಿ ಸಿ. ಐ. ಎ. ಯ ಪಾತ್ರವೇನೆಂಬುದೂ ಎಲ್ಲರಿಗೂ ತಿಳಿದ ವಿಚಾರ.

ನಮ್ಮ ವಲಯದಲ್ಲೂ ನಮಗೆ ಸ್ವಾತಂತ್ರ್ಯ ಲಭಿಸಿದ ಅನಂತರ ನಡೆಯುತ್ತಿರುವುದೇನು? ಪಾಕಿಸ್ತಾನದೊಡನೆ 1954 ರಲ್ಲಿ ಒಪ್ಪಂದ ಮಾಡಿಕೊಂಡವರು ಯಾರು? ಕೊರಿಯಾದಲ್ಲಿ ಹಸ್ತಕ್ಷೇಪ ನಡೆಸಿದ್ದು ಯಾರು? ವಿಯೆತ್ನಾಮಿನ ಜನರ ಸ್ವಾತಂತ್ರ್ಯಾಪಹರಣಕ್ಕಾಗಿ ಅಲ್ಲಿ 25 ವರ್ಷ ಅಕ್ರಮ ಪ್ರವೇಶ ನಡೆಸಿದವರು ಯಾರು? ಬಾಂಗ್ಲಾದೇಶದ ವಿಮೋಚನಾ ಸಮರದ ಸಂದರ್ಭದಲ್ಲಿ ಅಮೆರಿಕ ತಳೆದ ನಿಲುವೇನು?

ಇದು ಒಂದು ದೇಶದ ಪ್ರಶ್ನೆ ಮಾತ್ರವಲ್ಲ. ಯಾವ ದೇಶದ ಕುರಿತೇ ಆಗಲಿ ಅಮೆರಿಕದ ಪಾತ್ರವೇನೆಂಬುದು ಎಲ್ಲರಿಗೂ ತಿಳಿದ ವಿಚಾರ. ಇರಾನನ್ನೇ ತೆಗೆದುಕೊಳ್ಳಿರಿ. ಅಲ್ಲಿನ ಜನರು ಷಾನ ಆಳ್ವಿಕೆಯನ್ನು ಕೊನೆಗೊಳಿಸಿದರು. ಆದರೆ ಆತ ಬೇರೆಡೆ ಆಶ್ರಯ ಪಡೆದ.

ಕಳೆದ ದಶಕವಿಡೀ ಸತತವಾಗಿ ಹಿನ್ನಡೆಯೇ ಉಂಟಾಗಿದ್ದರೂ, ಅಮೆರಿಕನ್ ಸಾಮ್ರಾಜ್ಯಶಾಹಿಗಳು ಈ ವಲಯದಲ್ಲಿ ಪುನಃ ಪ್ರವೇಶಿಸಲು ಬಹಳವಾಗಿ ಆಸಕ್ತರಾಗಿದ್ದಾರೆ. ಪಾಕಿಸ್ತಾನವನ್ನು ತಮ್ಮ ಮಿಲಿಟರಿ ನೆಲೆಯನ್ನಾಗಿಸಿ ಅವರು ಅಫ್‌ಘಾನಿಸ್ತಾನವೂ ಸೇರಿದಂತೆ ಈ ಇಡೀ ವಲಯದಲ್ಲಿ ಹಸ್ತಕ್ಷೇಪ ಮಾಡಬಯಸುತ್ತಾರೆ.

ಅವರಿಗೆ ಪಾಕಿಸ್ತಾನದ ಸರಕಾರವು ಸಹಾಯ ನೀಡುತ್ತಿದೆ. ಜನರಿಂದ ದೂರೀಕರಿಸಲ್ಪಟ್ಟ ಮಿಲಿಟರಿ ಸರ್ವಾಧಿಕಾರವು ಜನರ ಗಮನವನ್ನು ದೈನಂದಿನ ಸಮಸ್ಯೆಗಳಿಂದ ಬೇರೆಡೆಗೆ ಸೆಳೆಯಲು ಅಮೆರಿಕನ್ ಸಾಮ್ರಾಜ್ಯಶಾಹಿಗಳು ಏನು ಹೇಳಿದರೂ ಮಾಡಲು ಸಿದ್ಧವಿದೆ. ಅವರು ಎಲ್ಲರಿಗೂ ಶಸ್ತ್ರಾಸ್ತ್ರಗಳನ್ನು ಕೊಟ್ಟು, ತರಬೇತು ನೀಡುತ್ತಿದ್ದಾರೆ. ಆದರೆ ಇದನ್ನು ಅವರು ಅಲ್ಲಗಳೆಯುತ್ತಿದ್ದಾರೆ. ಮತ್ತು ಇದು ಮಾನವೀಯ ದೃಷ್ಟಿಯಿಂದ ಅವರು ಮಾಡುತ್ತಿರುವ ಕೆಲಸವೆಂದು ಹೇಳಿಕೊಳ್ಳುತ್ತಿದ್ದಾರೆ.

ಆದ್ದರಿಂದ ಈ ಸಂದರ್ಭದಲ್ಲಿ ನಾವು ಸೋವಿಯತ್ ಒಕ್ಕೂಟ ಮತ್ತು ಅಮೆರಿಕನ್ ಸಾಮ್ರಾಜ್ಯಶಾಹಿಗಳು ವಹಿಸುತ್ತಿರುವ ಪಾತ್ರ ಒಂದೇ ಎನ್ನುವ ಹಾಗಿಲ್ಲ.

ಅಮೆರಿಕದ ನೀತಿ ಎಲ್ಲರಿಗೂ ತಿಳಿದಿದೆ ಅಲ್ಲಿನ ಚುನಾವಣೆಗಳೂ ಈ ನೀತಿಯದ್ದೇ ಒಂದು ಅಂಶವೆಂಬುದು ಸತ್ಯ. ಈ ಬಗ್ಗೆ ನಾನು ಅಧ್ಯಕ್ಷ ಕಾರ್ಟರರ ಸಲಹೆಗಾರ ಬಿಗ್ನ್ಯೂ ಬ್ರೆಜಿನ್‌ಸ್ಕಿ ಅವರೊಡನೆ ಜನವರಿ22ರಂದು ನಡೆದ ಸಂದರ್ಶನವನ್ನು ಉದಾಹರಿಸಬಯಸುತ್ತೇನೆ:-

ಪ್ರಶ್ನೆ : ಈ ಸಂದರ್ಭದಲ್ಲಿ, ಅಫ್‌ಘಾನಿಸ್ತಾನದಲ್ಲಿ ಈಗ ನಡೆಯುತ್ತಿರುವ ದಂಗೆಯು ಜೀವಂತವಾಗಿ ಉಳಿಯುವ ಅವಶ್ಯಕತೆಯಿದೆಯೆ?

ಉತ್ತರ: ನೈತಿಕಹಾಗೂ ರಾಜಕೀಯ ದೃಷ್ಟಿಯಿಂದ ನೋಡುವುದಾದರೆ, ತಮ್ಮ ಸ್ವಾತಂತ್ರ್ಯಕ್ಕಾಗಿ ಹೋರಾಡುವ, ಅದರಲ್ಲೂ ಅದಕ್ಕಾಗಿ ತಮ್ಮ ರಕ್ತ ಹರಿಸಲೂ ಸಿದ್ಧರಿರುವ ಜನರಿಗೆ ಸಹಾನುಭೂತಿ ತೋರಿಸುವುದು ನಮ್ಮ ಕರ್ತವ್ಯವಾಗಿದೆ.

ಆ ಮೇಲೆ, ಶಸ್ತ್ರಾಸ್ತ್ರ ಸಹಾಯ ಮತ್ತು ಅಮೆರಿಕದ ನೀತಿಯಲ್ಲಾದ ಬದಲಾವಣೆಯ ಕುರಿತಾಗಿ ಮಾತನಾಡುತ್ತಾ ಅವರು, "ಕಳೆದ ಮೂರು ವರ್ಷಗಳಲ್ಲಿ ಅಧ್ಯಕ್ಷ ಕಾರ್ಟರರು ನಾವು ಎದುರಿಸುತ್ತಿರುವ ಯುದ್ಧತಂತ್ರಾಹ್ವಾನಕ್ಕೆ ಧೃಡ ಹಾಗೂ ಉದ್ದೇಶಪೂರಿತ ಪ್ರತಿಕ್ರಿಯೆ ವ್ಯಕ್ತಪಡಿಸಿದ್ದಾರೆ. ರಕ್ಷಣಾವಶ್ಯಕತೆಗಳ ಬಗ್ಗೆ ಎಂಟು ವರ್ಷಗಳ ರಿಪಬ್ಲಿಕನರ ಅಲಕ್ಷ್ಯದ ಅನಂತರ, ಈ ಪ್ರವೃತ್ತಿಯನ್ನು ಅಧ್ಯಕ್ಷರು ಬದಲಾಯಿಸಿದ್ದಾರೆ ಮತ್ತು ಮೂರು ವರ್ಷಗಳಲ್ಲಿ ಸತತವಾಗಿ ರಕ್ಷಣಾ ವೆಚ್ಚವನ್ನು ಹೆಚ್ಚಿಸಿದ್ದಾರೆ. ನ್ಯಾಟೋ ಆಧುನೀಕರಣಕ್ಕಾಗಿ ದೀರ್ಘ ಕಾಲದ ಆಧುನೀಕರಣ ಕಾರ್ಯಕ್ರಮವನ್ನು ಆರಂಭಿಸಿದ್ದಾರೆ. ನಮ್ಮ ಸ್ನೇಹಿತ ರಾಷ್ಟ್ರಗಳಿಂದ, ತಮ್ಮ ರಕ್ಷಣಾ ಬಜೆಟುಗಳನ್ನು ಶೇ. 3 ಕ್ಕಿಂತಲೂ ಅಧಿಕವಾಗಿ ಹೆಚ್ಚಿಸುವ ಆಶ್ವಾಶನೆಗಳನ್ನು ಪಡೆದಿದ್ದಾರೆ."

ಶ್ರೀ ಭೂಪೇಶ್ ಗುಪ್ತಾ ಹೇಳಿದಂತೆ, ಶಸ್ತ್ರಾಸ್ತ್ರಗಳಿಗೋಸ್ಕರ ಮತ್ತು ಜಗತ್ತಿನ ವಿವಿಧ ಭಾಗಗಳಲ್ಲಿ ಮಿಲಿಟರಿ ನೆಲೆಗಳನ್ನು ಸ್ಥಾಪಿಸುವ ಸಲುವಾಗಿ ಇಷ್ಟು ಹಣ ಖರ್ಚು ಮಾಡುವುದರ ಉದ್ದೇಶವೇನು? ಮತ್ತು ಅದು ಯಾರಿಗಾಗಿ?

"ಸೋವಿಯತ್ ಒಕ್ಕೂಟದ ವಿರುದ್ಧ ಅಮೆರಿಕದ ಯುದ್ಧ ತಂತ್ರ" ವೆಂಬ ಶಿರೋನಾಮೆಯಲ್ಲಿ ಇವತ್ತಿನ (ಜ. 24) ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಯಲ್ಲಿ ಪ್ರಕಟಿತವಾದ ಪಿ. ಟಿ. ಐ. ವರದಿ ಇಂತಿದೆ:-

"ಐಸೆನ್ ಹೋವರ್ ಸರಕಾರವು ಸ್ಥಾಪಿಸಿದ ಸೆಂಟೋವು ಈ ವಲಯದಲ್ಲಿ ಪಾಶ್ಚಾತ್ಯ ಪರ ರಾಷ್ಟ್ರಗಳ ನಡುವೆ ಸೇನಾ ಮೈತ್ರಿ (military alliances) ಗಳನ್ನು ಸ್ಥಾಪಿಸಿದ್ದರೆ, ಅಮೆರಿಕದ ಈ ಹೊಸ ಕಾರ್ಯತಂತ್ರವು, ಇಸ್ರೇಲ್, ಪಾಕಿಸ್ತಾನ, ಸೌದಿ ಅರೇಬಿಯಾ ಮತ್ತು ಈಜಿಪ್ಟ್ ರಾಷ್ಟ್ರಗಳ ನಡುವೆ "ಭದ್ರತಾಸಂಬಂಧ" (security ties) ಗಳನ್ನು ಸ್ಥಾಪಿಸುವ ಉದ್ದೇಶ ಹೊಂದಿದೆ. ಈ ದೇಶಗಳಿಗೆ ಶಸ್ತ್ರಾಸ್ತ್ರಗಳನ್ನು ಪೂರೈಸುವುದಲ್ಲದೆ, ಅಮೆರಿಕವು ಆ ದೇಶಗಳಿಗೆ ತನ್ನ ಸೈನ್ಯವು ಭೇಟಿ ಕೊಡುವುದಕ್ಕೆ ಮತ್ತು ಜತೆ ಸೇನಾ ಕಾರ್ಯಾಚರಣೆಗಳನ್ನು ನಡೆಸುವುದಕ್ಕೆ ಸಿದ್ಧವಿದೆ.

ಇವೆಲ್ಲಕ್ಕೂ ಅಫ್‌ಘಾನ್ ಜನರ ಪ್ರತಿಕ್ರಿಯೆ ಏನು? ಅವರ ಭಾವನೆಗಳೇನು? ಪತ್ರಿಕೆಗಳು ಹೇಳುತ್ತಿರುವುದನ್ನು ಅಥವಾ ಅಮೆರಿಕದ ಪ್ರಚಾರಗಳನ್ನು ನಾವು ನಂಬಬಹುದೇ? ಈ ಪ್ರಚಾರಗಳನ್ನು ನಾನು ನಂಬುವುದಿಲ್ಲ. ಬದಲಾಗಿ ಅಫ್‌ಘಾನ್ ಜನರ ನಿಜವಾದ ಪ್ರತಿನಿಧಿ ಮತ್ತು ನಾಯಕನೊಬ್ಬ ಹೇಳಿದುದನ್ನು ನಂಬುತ್ತೇನೆ. ನಮ್ಮ ಐಕ್ಯ ಸ್ವಾತಂತ್ರ್ಯ ಹೋರಾಟದ ಅತ್ಯಂತ ಗೌರವಾನ್ವಿತ ನಾಯಕ ಖಾನ್ ಅಬ್ದುಲ್ ಗಫರ್‌ಖಾನ್ ಇತ್ತೀಚೆಗೆ ಪತ್ರಿಕೆಗಳಿಗಿತ್ತ ಸಂದರ್ಶನದಲ್ಲಿ ಏನು ಹೇಳಿದರೆಂಬುದನ್ನು ಇಲ್ಲಿ ತಿಳಿಸಬಯಸುತ್ತೇನೆ.

ಹಕೀಕತ್ ಇಂಕ್ವಿಲಾಬ್ ಸೌರ್ ಓ ಎಂಬ ಪತ್ರಿಕೆ ಕೇಳಿದ ಪ್ರಶ್ನೆ:- "ಕಳೆದ ಡಿಸೆಂಬರಿನಲ್ಲಿ ಆದ ಬದಲಾವಣೆಗಳು ಸೌರ್ ಕ್ರಾಂತಿಯ (ಏಪ್ರಿಲ್ ಕ್ರಾಂತಿಯ:-ಅನು:) ಮೇಲೆ ಬೀರಿದ ಪರಿಣಾಮಗಳ ಬಗ್ಗೆ ನಿಮ್ಮ ಅಭಿಪ್ರಾಯವೇನು?"

ಉತ್ತರ:- "ಆ ಸಮಯದಲ್ಲಿ ನಾನು ಜಲಾಲಾಬಾದಿನಲ್ಲಿದ್ದೆ. ಡಿಸೆಂಬರಿನಲ್ಲಿ ಆದ ಬದಲಾವಣೆಗಳನ್ನು ಜನರು ಹಾರ್ದಿಕವಾಗಿ ಸ್ವಾಗತಿಸಿದ್ದರಲ್ಲದೆ, ಅವನ್ನು ಉತ್ಸವವನ್ನಾಗಿ ಆಚರಿಸಬೇಕೆಂಬುದು ಅವರ ಅಭಿಪ್ರಾಯವಾಗಿತ್ತು. ಸೋವಿಯತ್ ಒಕ್ಕೂಟದ ಸಹಾಯ ಅವರಿಗೆ ಸಂತೋಷವುಂಟುಮಾಡಿತ್ತು. ಆದರೆ ಕೆಲವು ದಿನಗಳ ಬಳಿಕ ಸೋವಿಯತ್ ಒಕ್ಕೂಟದ ವಿರುದ್ಧ ಪ್ರಚಾರ ಆರಂಭವಾಯಿತು. ಇದರ ಮೂಲ ತಿಳಿದು ನನಗೆ ಆಶ್ಚರ್ಯವಾಯಿತು. ಈ ಪ್ರಚಾರವನ್ನು ಹರಡುತ್ತಿದ್ದವರು ಅಮೆರಿಕನರು, ಬ್ರಿಟಿಷರು ಮತ್ತು ಅವರ ಕೈಗೊಂಬೆಗಳೆನ್ನುವುದರಲ್ಲಿ ಸಂದೇಹವಿಲ್ಲ."

ಆಮೇಲೆ ಸೋವಿಯತ್ ಒಕ್ಕೂಟ ಮತ್ತು ಅಫ್‌ಘಾನಿಸ್ತಾನಗಳ ನಡುವಣ ಪರಂಪರಾಗತ ಮೈತ್ರಿಯ ಬಗ್ಗೆ ಬಕ್‌ತ್ರ್-ಕ್ಯು ಎಂಬ ಪತ್ರಿಕೆ ಕೇಳಿದ ಪ್ರಶ್ನೆಗೆ ಉತ್ತರಿಸುತ್ತಾ ಅವರೆಂದರು:- "ನಮ್ಮನ್ನು ಪ್ರಗತಿಹೊಂದಲು ಬ್ರಿಟಿಷರು ಬಿಡಲಿಲ್ಲವೆಂಬುದು ನಿಮಗೆ ಅಫ್‌ಘಾನ್ ಚರಿತ್ರೆಯಿಂದ ತಿಳಿಯುತ್ತದೆ. ನಮ್ಮ ಜನರ ನಡುವೆ ಪುರೋಗಾಮಿಯೊಬ್ಬ ಹುಟ್ಟಿದಾಗಲೆಲ್ಲ, ಅವನನ್ನು ದ್ರೋಹಿಯೆಂದು ಕರೆದು, ದೇಶದಿಂದ ಗಡೀಪಾರು ಮಾಡುತ್ತಿದ್ದರು. ಖುದಾ-ಈ-ಖಿದ್ಮತ್‌ಗಾರರು ಮತ್ತು ಕಾಂಗ್ರೆಸ್ ಸ್ವಾತಂತ್ರ್ಯ ಹೋರಾಟದಲ್ಲಿ ಜಯಿಸಿ ಭಾರತದಿಂದ ಬ್ರಿಟಿಷರನ್ನು ಓಡಿಸಿದಾಗ, ಅಫ್‌ಘಾನಿಸ್ತಾನವು ಬ್ರಿಟನ್ ಮತ್ತು ರಶ್ಯಾ-ಇವೆರಡು ಬೃಹತ್ ಶಕ್ತಿಗಳ ನಡುವೆ ಸಿಲುಕಿಕೊಂಡಿತ್ತು. ಆದರೆ ಬ್ರಿಟಿಷರು ಯಾವಾಗಲೂ ಅಫ್‌ಘಾನಿಸ್ತಾನದ ನಾಶವನ್ನೇ ಬಯಸಿ ಕೆಲಸ ಮಾಡುತ್ತಿದ್ದರು. ಅವರು ನಮ್ಮನ್ನು ಪ್ರಗತಿ ಹೊಂದಲು ಬಿಡಲಿಲ್ಲ. ಆದರೆ ಸೋವಿಯತ್ ಒಕ್ಕೂಟವು ನಮ್ಮ ವ್ಯವಹಾರಗಳಲ್ಲಿ ಹಸ್ತಕ್ಷೇಪ ನಡೆಸದೆ, ನಮಗೆ ಸಹಾಯವನ್ನೂ ಮಾಡಿದೆ."

ಖಾನ್ ಅಬ್ದುಲ್ ಗಫರ್ ಖಾನರು ಈ ರೀತಿ ಹೇಳಿದ ಬಳಿಕವೂ ಅಫ್‌ಘಾನಿಸ್ತಾನದಲ್ಲಿ ನಡೆಯುತ್ತಿರುವ ವಿದ್ಯಮಾನಗಳಿಗೆ ಅಲ್ಲಿಯ ಜನರ ಬೆಂಬಲವಿಲ್ಲವೆಂದು ವಾದಿಸುತ್ತಿದ್ದೇವೆ. ಸೋವಿಯತ್ ಒಕ್ಕೂಟದ ಪ್ರವೇಶವನ್ನು ಸಹಾಯವಲ್ಲ, ಹಸ್ತಕ್ಷೇಪವೆಂದು ಕರೆಯಲಾಗುತ್ತಿದೆ. ಕೆಲವರು ಅದನ್ನು ಆಕ್ರಮಣವೆಂದು ಕರೆಯುವವರೆಗೆ ತಲುಪಿದ್ದಾರೆ. ಪ್ರಾಯಶಃ ಅವರಿಗೆ ಕಳೆದ ವರ್ಷದಿಂದ ಅಲ್ಲಿ ಅಮೆರಿಕನ್ ಸಾಮ್ರಾಜ್ಯಶಾಹಿಗಳು ಏನು ಮಾಡುತ್ತಿದ್ದರೆಂಬುದು ತಿಳಿದಿಲ್ಲ. ಕಳೆದ ಒಂದು ವರ್ಷದಿಂದೀಚೆಗೆ ಅಲ್ಲಿ ನಡೆಯುತ್ತಿದ್ದುದೇನೆಂದೂ ಅವರು ಹೇಳುವುದಿಲ್ಲ.

ಸಾಮ್ರಾಜ್ಯಶಾಹಿಗಳು ಬಂಡುಕೋರರಿಗೆ ಶಸ್ತ್ರಾಸ್ತ್ರಗಳನ್ನು ಪೂರೈಸುತ್ತಿದ್ದಾರೆ ಮತ್ತು ಅವರಿಗೆ ತರಬೇತಿ ನೀಡುತ್ತಿದ್ದಾರೆ. ಆಮೇಲೆ, ಅವರನ್ನು ಸರಕಾರದಲ್ಲಿ ಅಸ್ಥಿರತೆಯನ್ನು ಉಂಟುಮಾಡಲೋಸುಗ ಅಫ್‌ಘಾನಿಸ್ತಾನದೊಳಗೆ ಕಳಿಸಲಾಗುತ್ತಿತ್ತು.

ಇವೆಲ್ಲಾ ಕೃತ್ಯಗಳನ್ನೂ ಸೋವಿಯತ್ ಒಕ್ಕೂಟ ಮಾಡುತಿತ್ತೆಂದು ಯಾರೂ ಹೇಳುವಂತಿಲ್ಲ. ಇದು ಸಾಮ್ರಾಜ್ಯಶಾಹಿಗಳ ಕೃತ್ಯವೇ ಆಗಿದೆ. ಸೋವಿಯತ್ ಒಕ್ಕೂಟವು ಅಫ್‌ಘಾನಿಸ್ತಾನಕ್ಕೆ ನೀಡಿದ ಅವಶ್ಯಕ ಸಹಾಯದಿಂದ ಈ ಸತ್ಯವನ್ನು ಬೇರ್ಪಡಿಸಲು ಸಾಧ್ಯವಿಲ್ಲ. ಈ ಬಂಡುಕೋರರು ಅಮೆರಿಕನ್ ಸಾಮ್ರಾಜ್ಯಶಾಹಿಗಳಿಂದ ತರಬೇತು ಪಡೆಯುತ್ತಿದ್ದರು.

ಈ ಎಲ್ಲಾ ವಿಚಾರಗಳನ್ನೂ ಗಮನಕ್ಕೆ ತೆಗೆದುಕೊಂಡರೆ, ನಮ್ಮ ಸರಕಾರವು ಹಿಂಜರಿಯುತ್ತಿದೆಯೆಂದು ನಾನು ಭಾವಿಸುತ್ತೇನೆ. ಹಿಂದಿನ ಸರಕಾರವು ಈ ವಿಚಾರದಲ್ಲಿ ತಪ್ಪು ಮಾಡಿತ್ತು ಮತ್ತು ಈ ಸರಕಾರವೂ ಸರಿಯಾಗಿ ವರ್ತಿಸುತ್ತಿಲ್ಲ. ವಿಶ್ವಸಂಸ್ಥೆಯಲ್ಲಿ ಒಂದು ನಿಲುವನ್ನು ತಳೆದ ಬಳಿಕ, ಪ್ರಾಯಶಃ ಭಾರತೀಯ ವೃತ್ತಪತ್ರಿಕೆಗಳಿಂದ ಸೂಚನೆ ಪಡೆದು ಹಲವಾರು ವಿಚಾರಗಳು ಹೇಳಲ್ಪಟ್ಟಿದ್ದುವು. ಈ ಪ್ರಶ್ನೆಯ ಬಗ್ಗೆ ಅವರು ಡೋಲಾಯಮಾನರಾಗಿದ್ದಾರೆ. ಕಳೆದ ಒಂದು ವರ್ಷದಿಂದೀಚೆಗೆ ಅಮೆರಿಕವು ಬಂಡುಕೋರರಿಗೆ ಪಾಕಿಸ್ತಾನದಲ್ಲಿ ತರಬೇತಿ ನೀಡಿ, ಅವರಿಗೆ ಶಸ್ತ್ರಾಸ್ತ್ರಗಳನ್ನು ಕೊಟ್ಟು, ಅಫ್‌ಘಾನಿಸ್ತಾನದಲ್ಲಿ ಕ್ಷೋಭೆ ಉಂಟು ಮಾಡುವ ಉದ್ದೇಶದಿಂದ ಅವರನ್ನು ಅಲ್ಲಿಗೆ ಕಳಿಸುತಿತ್ತು. ವಸ್ತುಸ್ಥಿತಿ ಹೀಗಿರುವಾಗ ನಮ್ಮ ಸರಕಾರ ಒಂದು ಸ್ಪಷ್ಟ ನಿಲುವನ್ನು ತಳೆದಿದೆಯೇ ಎಂಬುದನ್ನು ನಾನು ವಿದೇಶ ವ್ಯವಹಾರಗಳ ಸಚಿವರಿಂದ ತಿಳಿಯಬಯಸುತ್ತೇನೆ. ಅಮೆರಿಕನ್ ಸಾಮ್ರಾಜ್ಯಶಾಹಿಗಳ ಹಸ್ತಕ್ಷೇಪವನ್ನು ತಡೆಯುವ ಉದ್ದೇಶದಿಂದ 1978ರ ಒಪ್ಪಂದದ ಪ್ರಕಾರ ಸೋವಿಯತ್ ಸಹಾಯವನ್ನು ಬಯಸಿದ ಅಫ್‌ಘಾನಿಸ್ತಾನದ ಈ ಕ್ರಮವು ನ್ಯಾಯವಾದುದು. ಹಸ್ತಕ್ಷೇಪವು ಕೊನೆಗೊಂಡು, ಶಾಂತಿ ಮರುಸ್ಥಾಪನೆಯಾದ ಬಳಿಕ ಸೋವಿಯತ್ ಸೈನ್ಯವು ಅಲ್ಲಿ ಒಂದು ಕ್ಷಣವೂ ಇರುವುದಿಲ್ಲವೆಂದು ಅಫ್‌ಘಾನಿಸ್ತಾನ್ ಸರಕಾರ ಭರವಸೆಯಿತ್ತಿದೆ. ವಿದೇಶ ವ್ಯವಹಾರಗಳ ಸಚಿವರು ಇವೆಲ್ಲವನ್ನೂ ಸ್ಪಷ್ಟವಾಗಿ ಹೇಳುವರೆ? ಬಂಡುಕೋರರಿಗೆ ತಮ್ಮ ನೆಲದಲ್ಲಿ ತರಬೇತಿ ನೀಡುವುದನ್ನು ನಿಲ್ಲಿಸುವಂತೆ ನಾವು ಪಾಕಿಸ್ತಾನ್ ಸರಕಾರವನ್ನು ಕೇಳಿಕೊಂಡಿದ್ದೇವೆಯೇ? ಯಾಕೆಂದರೆ ಈ ಚಟುವಟಿಕೆಗಳು ಅಫ್‌ಘಾನಿಸ್ತಾನದ ಆಂತರಿಕ ಪರಿಸ್ಥಿತಿಗೆ ಮಾತ್ರ ಹಾನಿಕಾರಕವಲ್ಲ; ಅದು ಈ ಇಡೀ ವಲಯದ ಪರಿಸ್ಥಿತಿಗೆ ಹಾನಿಕಾರಕ. ನಾವು ಅಫ್‌ಘಾನಿಸ್ತಾನದ ಸರಕಾರಕ್ಕೆ ಸಹಾಯ ನೀಡಲು ತಯಾರಿದ್ದೇವೆಯೇ ಮತ್ತು ಯಾವುದೇ ವಿದೇಶಿ ಹಸ್ತಕ್ಷೇಪದ ವಿರುದ್ಧ ಅವರಿಗೆ ಸಹಾಯದ ಭರವಸೆ ಕೊಡಲು ಸಿದ್ಧರಿದ್ದೇವೆಯೇ?

ಅಮೆರಿಕನ್ ಸಾಮ್ರಾಜ್ಯಶಾಹಿಗಳ ಗುರಿಯೇನೆಂದು ಈ ಸರಕಾರ ತಿಳಿದಿದೆಯೇ? ನಾನು ಹಿಂದೆ ಹೇಳಿದಂತೆ ಅದು ಏನೆಂದು ಪಿ. ಟಿ. ಐ. ವರದಿಯಲ್ಲಿ ಸ್ಪಷ್ಟವಾಗಿ ಹೇಳಲ್ಪಟ್ಟಿದೆ. ವಿದೇಶ ವ್ಯವಹಾರಗಳ ಸಚಿವರು ಈ ಪ್ರಶ್ನೆಯ ಮೇಲೆ ಬೆಳಕು ಚೆಲ್ಲಬೇಕೆಂದು ಬಯಸುತ್ತೇನೆ. ಇದು ವಿವಿಧ ಪಕ್ಷಗಳ ಆಂತರಿಕ ವ್ಯವಹಾರಗಳಿಗೆ ಮಾತ್ರ ಸೀಮಿತವಾದ ಪ್ರಶ್ನೆಯಲ್ಲ. ಇದು ಇಡೀ ದೇಶಕ್ಕೆ ಸಂಬಂಧಿಸಿದ ಪ್ರಶ್ನೆ. ಈ ಪ್ರಶ್ನೆ ಇಡೀ ರಾಷ್ಟ್ರೀಯ ಹೋರಾಟದ ಚರಿತ್ರೆಗೇ ಸಂಬಂಧಪಟ್ಟಿದೆ. ನಮಗೆ ಅಮೆರಿಕನ್ ಸಾಮ್ರಾಜ್ಯಶಾಹಿಗಳು ಏನು ಮಾಡುತ್ತಿದ್ದಾರೆ. ಮತ್ತು ಚರಿತ್ರೆಯ ಕೆಲವು ಮಹತ್ವದ ಸಂದರ್ಭಗಳಲ್ಲಿ ಅವರ ಪ್ರಚೋದನೆಯಿಂದ ನಮಗೆ ತೊಂದರೆಗಳು ಉಂಟಾದಾಗ ನಮಗೆ ಸೋವಿಯತ್ ಒಕ್ಕೂಟ ಏನು ಸಹಾಯ ಮಾಡಿತ್ತೆಂಬ ಪ್ರಶ್ನೆ. ಇದನ್ನು ಮತ್ತು ನಮ್ಮ ಅಲಿಪ್ತ ವಿದೇಶ ನೀತಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ನಾವು ಹಿಂಜರಿಯಬಾರದು. ವಿಶ್ವಸಂಸ್ಥೆಯಲ್ಲಿ ಒಂದು ಪಕ್ಷದ ಪರವಾಗಿ 104 ಮತಗಳಿದ್ದುವೆಂಬ ಒಂದೇ ಕಾರಣಕ್ಕಾಗಿ ನಾವು ಆ 104 ರಾಷ್ಟ್ರಗಳೊಂದಿಗೆ ಮತ ಚಲಾಯಿಸಲಿಲ್ಲವೆಂಬ ವಾದ ತಪ್ಪು.

ನಾಳೆ ನಡೆಯಲಿರುವ ಇಸ್ಲಾಮಿಕ್ ರಾಷ್ಟ್ರಗಳ ಸಭೆಯು ಕೆಲವು ನಿರ್ಧಾರಗಳನ್ನು ಕೈಗೊಳ್ಳಲಿದೆ. ಆ ನಿರ್ಧಾರಗಳು ತಪ್ಪಾದರೂ, ಅಲ್ಲದಿದ್ದರೂ ಅವುಗಳ ಆಧಾರದ ಮೇಲೆ ನಮ್ಮ ಮತ ಚಲಾಯಿಸಲ್ಪಡುವುದೇ? ಅಲಿಪ್ತತೆ, ಇತರರ ವ್ಯವಹಾರಗಳಲ್ಲಿ ಹಸ್ತಕ್ಷೇಪ ನಡೆಸದಿರುವುದು, ವಿಮೋಚನಾ ಸಮರಗಳಿಗೆ ಬೆಂಬಲವೀಯುವುದು ಮತ್ತು ಸಾಮ್ರಾಜ್ಯಶಾಹಿ ಹಸ್ತಕ್ಷೇಪವನ್ನು ವಿರೋಧಿಸುವುದೇ ಮೊದಲಾದ ನಮ್ಮ ಮೂಲಭೂತ ನೀತಿಗಳ ಆಧಾರದ ಮೇಲೆ ನಾವು ಒಂದು ನಿರ್ಧಾರಕ್ಕೆ ಬರಬೇಕಾಗಿದೆ.

ಎರಡು ವಾರಗಳಲ್ಲಿ ನಡೆದ ವಿದ್ಯಮಾನಗಳಿಂದ ಈ ಸಮಸ್ಯೆಯನ್ನು ಅರ್ಥಮಾಡಿಕೊಂಡರೆ ಸಾಲದು. ಕಳೆದ ಒಂದು ವರ್ಷದಿಂದ ನಡೆಯುತ್ತಿರುವ ಬೆಳವಣಿಗೆಯ ದೃಷ್ಟಿಯಿಂದ ಅರ್ಥಮಾಡಿಕೊಳ್ಳುವುದು ಅಗತ್ಯ.

●

ಬದಲಾವಣೆಯಿಲ್ಲದ ನೀತಿ

ಜನವರಿ 28, 1980 ರಂದು ಲೋಕಸಭೆಯಲ್ಲಿ ರಾಷ್ಟ್ರಪತಿಯವರ ಭಾಷಣಕ್ಕೆ ಕೃತಜ್ಞತೆ ಸಲ್ಲಿಸುವ ಗೊತ್ತುವಳಿಯ ಮೇಲೆ ಚರ್ಚೆ ನಡೆದಾಗ ಕಾಂ. ಸಮರ್ ಮುಖರ್ಜಿಯವರು ಮಾಡಿದ ಭಾಷಣದ ಸಾರಾಂಶ ಇಂತಿದೆ:-

ನಾನು ವಸ್ತುಸ್ಥಿತಿಯನ್ನು ತಿಳಿಯಬಯಸುತ್ತೇನೆ. ಆದರೆ ರಾಷ್ಟ್ರಪತಿಯವರ ಭಾಷಣದಲ್ಲಾಗಲೀ, ಆಳುವ ಪಕ್ಷದ ಚುನಾವಣಾ ಪ್ರಣಾಳಿಕೆಯಲ್ಲಾಗಲೀ ಎಲ್ಲಿಯೂ ಕಿಂಚಿತ್ತು ಆತ್ಮವಿಮರ್ಶೆಯಿಲ್ಲ. 1977ರ ಚುನಾವಣೆಯಲ್ಲಿ ಶ್ರೀಮತಿ ಇಂದಿರಾಗಾಂಧಿಯವರು ಅಧಿಕಾರದಿಂದ ಯಾಕೆ ಕಿತ್ತೆಸೆಯಲ್ಪಟ್ಟರೆಂಬ ವಿಚಾರದಲ್ಲಿ ಒಮ್ಮೆಯಾದರೂ ಆತ್ಮವಿಮರ್ಶೆ ಮಾಡಿದ್ದು ಕಾಣುವುದಿಲ್ಲ. ಹಿಂದೆ ಜನರು ಯಾಕೆ ನಿಮ್ಮ ಸರಕಾರವನ್ನು ವಿರೋಧಿಸಿದರೆಂಬುದರಿಂದ ನೀವು ಪಾಠ ಕಲಿಯಲು ಪ್ರಯತ್ನಿಸುತ್ತಿಲ್ಲ.

ಈ ವಿಚಾರಗಳೆಲ್ಲಾ ಭವಿಷ್ಯಕ್ಕೂ ಸಂಬಂಧಿಸಿರುವುದರಿಂದ, ಅವುಗಳ ಗಂಭೀರತೆಯ ಕಡೆಗೆ ಗಮನ ಸೆಳೆಯಬಯಸುತ್ತೇನೆ. 1971ರಲ್ಲಿ ಜನರಿಂದ ಅಧಿಕಾರಕ್ಕೇರಿಸಲ್ಪಟ್ಟ ಸರಕಾರ 1977ರಲ್ಲಿ ಇಳಿಸಲ್ಪಟ್ಟಿತು. 1971ರಲ್ಲಿ ಸರಕಾರಕ್ಕೆ ಈಗಿನ ಸರಕಾರದಷ್ಟೇ ಬಹುಮತವಿದ್ದರೂ, 1977ರಲ್ಲಿ ಜನರು ಅದನ್ನು ತಿರಸ್ಕರಿಸಿದರು. ಆದ್ದರಿಂದ ಈ ಅವಧಿಯಲ್ಲಿ ಸರಕಾರವನ್ನು ವಿರೋಧಿಸುವುದಕ್ಕೆ ಜನರಿಗೆ ಏನೋ ಪ್ರಬಲ ಕಾರಣವಿದ್ದಿರಲೇಬೇಕು.

ಇದು ಮಾರ್ಕ್ಸ್‌ವಾದಿಗಳ ಪ್ರಚಾರವೆಂದು ನಮ್ಮೊಬ್ಬ ಗೆಳೆಯರು ಹೇಳುತ್ತಾರೆ. ಆದರೆ ಸಾವಿರಾರು ಮಂದಿ ಜನರನ್ನು ಸೆರೆಮನೆಗಳಿಗೆ ತಳ್ಳಿದುದು ಪ್ರಚಾರವೇ? ರಾಜನ್‌ನಂತಹ ವ್ಯಕ್ತಿಗಳನ್ನು ಸೆರೆಮನೆಗಳಲ್ಲಿ ಕೊಲೆಮಾಡಿದ್ದು ಪ್ರಚಾರವೇ? ನಮ್ಮ ಗೆಳೆಯ ಜ್ಯೋತಿರ್ಮಯ ಬಸುರವರನ್ನು ಹಿಸ್ಸಾರ್ ಜೇಲಿಗೆ ಕಳಿಸಿದ್ದು ಪ್ರಚಾರವೋ? ನೀವು ಇವುಗಳಿಂದ ಪಾಠ ಕಲಿತುಕೊಳ್ಳಲು ತಯಾರಿಲ್ಲದಿದ್ದರೆ, ಹಿಂದಿನ ಪರಿಣಾಮವನ್ನೇ ಎದುರಿಸಬೇಕಾದೀತು. ಈಗ ನಿಮ್ಮನ್ನು ಆರಿಸಿದ ಜನರೇ ಒಂದು ದಿನ ನಿಮ್ಮನ್ನು ಹೊರಗಟ್ಟಲಿದ್ದಾರೆ. ದಯವಿಟ್ಟು ಮರೆಯಬೇಡಿರಿ.

ನೀವು ಪ್ರಜಾಸತ್ತೆಯ ಬಗ್ಗೆ ಮಾತಾಡುತ್ತೀರಿ. ಈಗ ಏನಾಗಿದೆಯೆಂದು ಸ್ವಲ್ಪ ನೋಡೋಣ. ನಿಮಗೆ ಕೇವಲ ಶೇ. 43ರಷ್ಟು ಮತಗಳು ದೊರೆತಿವೆ. ಶೇ. 57ರಷ್ಟು ಮತಗಳು ನಿಮ್ಮ ವಿರುದ್ಧ ಬಿದ್ದಿವೆ. ನಿಮ್ಮ ಪರ ಮತ ನೀಡಿದ ಮಂದಿ ಮಾತ್ರ ಜನರೇ ಅಥವಾ ನಿಮ್ಮ ವಿರುದ್ಧ ಮತ ನೀಡಿದವರನ್ನೂ ಜನರೆಂದು ಹೇಳುವಿರಾ? ವಸ್ತುಸ್ಥಿತಿಯೇನೆಂಬುದನ್ನು ದಯವಿಟ್ಟು ತಿಳಿದುಕೊಳ್ಳಿರಿ. ಶೇ.57 ರಷ್ಟು ಜನರು ಬಹಳ ಸ್ಪಷ್ಟವಾಗಿ ನಿಮ್ಮ ಪರವಾಗಿ ಮತ ನೀಡಲು ನಿರಾಕರಿಸಿದ್ದಾರೆ. ಅವರನ್ನು ಯಾರು ಪ್ರತಿನಿಧಿಸುತ್ತಾರೆ? ವಿರೋಧ ಪಕ್ಷಗಳ ಹೊರತಾಗಿ ಅವರ ಪರ ಮಾತನಾಡುವವರು ಯಾರು?

ನಾವು ಸಂಖ್ಯಾಬಲದಲ್ಲಿ ಸಣ್ಣವರಾದರೂ, ಜನರ ಬಹುಮತ ನಮ್ಮ ಪರವಾಗಿದೆ. ಇದನ್ನು ಮತಗಳು ಚಲಾಯಿಸಲ್ಪಟ್ಟ ಕ್ರಮದಿಂದ ತಿಳಿಯಬಹುದು. ನಿಮ್ಮ ಮತಗಳನ್ನು ನೀವು ಕೇವಲ ಶೇ. 8 ರಷ್ಟು ಮಾತ್ರ ಹೆಚ್ಚಿಸಿಕೊಂಡಿದ್ದೀರಿ. 1977 ರಲ್ಲಿ ನಿಮಗೆ ಶೇ. 36 ರಿಂದ 37ರ ವರೆಗೆ ಮತಗಳು ದೊರೆತಿದ್ದುವು ಮತ್ತು ಈ ಬಾರಿ ನಿಮಗೆ ದೊರೆತದ್ದು ಬರೇ ಶೇ. 42 ರಿಂದ ಶೇ. 43ರಷ್ಟು ಮತಗಳು. ವ್ಯತ್ಯಾಸ ಕೇವಲ ಶೇ. 8 ರಷ್ಟು ಆಗಿದ್ದು, ಅದಕ್ಕೆ ಮತದಾರರ ಪಟ್ಟಿಗಳಲ್ಲಿರುವ ಲೋಪದೋಷಗಳು ಮತ್ತು ಪ್ರಚಲಿತ ಚುನಾವಣಾ ಪದ್ಧತಿಯೇ ಕಾರಣ. ನಿಮಗೆ ಅಧಿಕ ಸಂಖ್ಯೆಯಲ್ಲಿ ಲೋಕಸಭಾ ಸ್ಥಾನಗಳು ದೊರೆಯಲು ಇದೂ ಒಂದು ಕಾರಣ. ವಿರೋಧ ಪಕ್ಷಗಳೊಳಗಿನ ಒಡಕು ಇನ್ನೊಂದು ಮುಖ್ಯ ಕಾರಣ. ವಿರೋಧ ಪಕ್ಷಗಳೆಲ್ಲವೂ ಒಗ್ಗಟ್ಟಾದ ಮರುಕ್ಷಣವೇ ನೀವು ಕಿತ್ತೆಸೆಯಲ್ಪಡುವಿರಿ.

ಈ ಸಭೆಯ ಗಮನವನ್ನು ಇನ್ನೂ ಒಂದು ವಿಚಾರದೆಡೆಗೆ ಸೆಳೆಯಬಯಸುತ್ತೇನೆ. 1971ರಲ್ಲಿ ಶ್ರೀಮತಿ ಇಂದಿರಾ ಗಾಂಧಿಯವರ ಘೋಷಣೆಯೇನಿತ್ತು? ಅವರು "ಗರೀಬೀ ಹಟಾವೋ" ಘೋಷಣೆಯ ಮೂಲಕ ಗೆದ್ದಿದ್ದರು.

ಆದರೆ ಬಡತನ ದಿನದಿಂದ ದಿನಕ್ಕೆ ಹೆಚ್ಚುತ್ತಿರುವುದು ಕಟುಸತ್ಯ. ಜೀವನ ವೆಚ್ಚ ಏರುತ್ತಿರುವುದಕ್ಕೆ ನನ್ನಲ್ಲಿ ಸಾಕಷ್ಟು ಆಧಾರಗಳಿವೆ. 1971ರ ಚುನಾವಣೆಯ ಬಳಿಕ ಕೃಷಿಕಾರ್ಮಿಕರ ಆದಾಯವು ತುಂಬಾ ಇಳಿದಿದೆ. ಕಾರ್ಮಿಕರ ನಿಜವಾದ ಆದಾಯವೂ (real income) ಇಳಿದಿದೆ. ಆದರೆ ಗುತ್ತೇದಾರಿ ಮನೆತನಗಳ ಲಾಭವು ಹೆಚ್ಚಿದೆ. ನನ್ನಲ್ಲಿ 20 ದೊಡ್ಡ ಗುತ್ತೇದಾರಿ ಮನೆತನಗಳ ಪಟ್ಟಿಯಿದೆ. ಬಿರ್ಲಾರ ಆಸ್ತಿಪಾಸ್ತಿಗಳ ಮೌಲ್ಯವು 1966 ರಲ್ಲಿ ರೂ. 475 86 ಕೋಟಿಯಿದ್ದುದು ಮಾರ್ಚ್ 1977 ರಲ್ಲಿ 1070.20 ಕೋಟಿ ರೂಪಾಯಿಗಳಿಗೇರಿತ್ತು. 1966ರಲ್ಲಿ 505 ಕೋಟಿ ರೂಪಾಯಿಗಳಷ್ಟಿದ್ದ ಟಾಟಾರ ಆಸ್ತಿಪಾಸ್ತಿ 1977ರಲ್ಲಿ 1069.28 ಕೋಟಿ ರೂಪಾಯಿಗಳಿಗೇರಿತ್ತು. 1966 ರಲ್ಲಿ 92.70 ಕೋಟಿ ರೂಪಾಯಿಗಳಷ್ಟಿದ್ದ ಮಫತ್‌ಲಾಲರ ಆಸ್ತಿಪಾಸ್ತಿ 1977ರಲ್ಲಿ 285.63 ಕೋಟಿ ರೂಪಾಯಿಗಳಿಗೇರಿತ್ತು.

ನಾನು ಜನತಾ ಸರಕಾರದ ಪರವಾಗಿ ವಾದಿಸುತ್ತಿಲ್ಲ. ಅದನ್ನು ನಾವು ವಿರೋಧಿಸಿದ್ದು ನಿಮಗೆ ತಿಳಿದೇ ಇದೆ.

ಶ್ರೀಮತಿ ಇಂದಿರಾಗಾಂಧಿ:- ಇದು ನಿಜವಲ್ಲ. ನೀವು ಅವರ ಉಮೇದುವಾರರನ್ನು ಬೆಂಬಲಿಸಿದ್ದೀರಿ. ಅವರನ್ನು ನೀವು ವಿರೋಧಿಸಿದ್ದು ಯಾವಾಗ ಎಂಬ ವಿಚಾರ ತಿಳಿಯಲಪೇಕ್ಷಿಸುತ್ತೇನೆ.

ಶ್ರೀ ಇಂದ್ರಜಿತ್ ಗುಪ್ತಾ:- ಕೇರಳದಲ್ಲಿ ನೀವು ಜನತಾಪಕ್ಷಕ್ಕೆ ಬೆಂಬಲ ನೀಡಿದ್ದೀರಿ. 27 ಸ್ಥಾನಗಳಿಗೋಸ್ಕರ ನೀವು ಈಗಷ್ಟೇ ಕೇರಳದಲ್ಲಿ ಜನತಾ ಪಕ್ಷವನ್ನು ಬೆಂಬಲಿಸಿದ್ದೀರಿ.

ಶ್ರೀಮತಿ ಇಂದಿರಾಗಾಂಧಿ:- ನಾವು ಕೆಲವು ಮಂದಿ ಕಾಂಗ್ರೆಸಿಗರಿಗೆ ಬೆಂಬಲ ನೀಡಿದ್ದೆವು. ನಿಮ್ಮ ಬೆಂಬಲ ಪಡೆದವರೆಲ್ಲಾ ಕಮ್ಯುನಿಸ್ಟರೇ? ಆದರೆ ನಮ್ಮ ಬೆಂಬಲ ಪಡೆದವರೆಲ್ಲಾ ಕಾಂಗ್ರೆಸ್ಸಿಗರೇ ಆಗಿದ್ದರು.

ಶ್ರೀ ಸಮರ್ ಮುಖರ್ಜಿ:- ಜನತಾ ಸರಕಾರದ ವಿರುದ್ಧ ನಮ್ಮ ಒಂದು ಅತೀ ಮುಖ್ಯವಾದ ಮಾತೆಂದರೆ ಆರ್ಥಿಕ ವಿಚಾರಗಳಲ್ಲಿ ಅವರು ಶ್ರೀಮತಿ ಗಾಂಧಿಯವರ ನೀತಿಯನ್ನೇ ಅನುಸರಿಸುತ್ತಿದ್ದುದು. ನಾವು ಪ್ರಜಾಸತ್ತೆಯ ರಕ್ಷಣೆಗೋಸ್ಕರ ಅವರಿಗೆ ಬೆಂಬಲ ನೀಡಿದ್ದೆವು.

ಶ್ರೀಮತಿ ಗಾಂಧಿ:- ಅಲ್ಲವೇ ಅಲ್ಲ.

ಶ್ರೀ ಸಮರ್ ಮುಖರ್ಜಿ:- ನಾವು ಈ ವಿಚಾರವನ್ನು ಪದೇ ಪದೇ ಸ್ಪಷ್ಟಪಡಿಸಿದ್ದೆವು. 1975ರಲ್ಲಿ ಪ್ರಜಾಸತ್ತೆಯು ನಿಮ್ಮಿಂದ ಸಂಪೂರ್ಣ ನಾಶವಾಯಿತು. ಜನರು ಪಾರ್ಲಿಮೆಂಟರಿ ಪ್ರಜಾಪ್ರಭುತ್ವವನ್ನು ನಿಮ್ಮಿಂದ ರಕ್ಷಿಸಿ, ಜನತಾ ಸರಕಾರವನ್ನು ಅಧಿಕಾರಕ್ಕೇರಿಸಿದ್ದರು. ಪಾರ್ಲಿಮೆಂಟರಿ ಪ್ರಜಾಪ್ರಭುತ್ವ ಇಂದಿನವರೆಗೆ ಉಳಿದುಕೊಂಡಿರುವುದಕ್ಕೆ ಇದೇ ಕಾರಣ.

ನಾವು ಮುಖ್ಯವಾಗಿ ಟೀಕಿಸುವುದು ಕಾಂಗ್ರೆಸನ್ನು. ಶ್ರೀಮತಿ ಇಂದಿರಾಗಾಂಧಿಯವರ ಹನ್ನೊಂದು ವರ್ಷಗಳ ಆಳ್ವಿಕೆಯನ್ನೂ ಒಳಗೊಂಡಂತೆ, ಆರಂಭದಿಂದಲೇ ಕಾಂಗ್ರೆಸ್ ಸರಕಾರವು ಭಾರತದಲ್ಲಿ ಬಂಡವಾಳಶಾಹಿ ಬೆಳವಣಿಗೆಯ ನೀತಿಯನ್ನು ಅನುಸರಿಸುತಿತ್ತು. ಗುತ್ತೇದಾರಿ ಮನೆತನಗಳು ಅಭಿವೃದ್ಧಿ ಹೊಂದುವುದಕ್ಕೆ ಇದೇ ಮೂಲಕಾರಣ. ಸಂಪತ್ತು ಕೆಲವೇ ಜನರ ಕೈಯಲ್ಲಿ ಕೇಂದ್ರೀಕೃತವಾಗಿದೆ. ಬಡತನ ಹೆಚ್ಚುತ್ತಿದೆ, ನಿರುದ್ಯೋಗ ಹೆಚ್ಚುತ್ತಿದೆ, ಆರ್ಥಿಕ ಧ್ರುವೀಕರಣ ಬೆಳೆಯುತ್ತಿದೆ. ಆದ್ದರಿಂದಲೇ, ಹೆಚ್ಚು ಹೆಚ್ಚು ಸಂಖ್ಯೆಯಲ್ಲಿ ಕಾರ್ಮಿಕರು, ರೈತರು, ಬಡವರು ಮತ್ತು ನೌಕರರು ಚಳುವಳಿಯ ಮಾರ್ಗವನ್ನು ಅನುಸರಿಸುವುದು ಅನಿವಾರ್ಯವಾಗಿದೆ. ಬೆಲೆಯೇರಿಕೆಯನ್ನು ತಡೆಯುವುದು ಅಸಾಧ್ಯ. ಇದು ಬರೇ ಜನತಾ ಸರಕಾರದ ತಪ್ಪು ಮಾತ್ರವಲ್ಲ; ಹಿಂದೆ ನಿಮ್ಮ ಸರಕಾರ ಮಾಡಿದ ತಪ್ಪನ್ನೇ ಅವರೂ ಮಾಡಿದರು.

ನೀವು ಬಂಡವಾಳಶಾಹಿ ಪದ್ಧತಿಯನ್ನು ಬೆಳೆಸುವುದರಿಂದ, ಪಾರ್ಲಿ

(6ನೇ ಪುಟ ನೋಡಿ)

ಬದಲಾವಣೆಯಿಲ್ಲದ ನೀತಿ

[5ನೇ ಪುಟದಿಂದ]

ಮಾತ್ರ ಬಂಡವಾಳಶಾಹಿ ರಾಷ್ಟ್ರಗಳ ಮೇಲೆ ನಿಮ್ಮ ಅವಲಂಬನೆ ದಿನೇ ದಿನೇ ಹೆಚ್ಚುತ್ತಿದೆ. ಈಗ ಸಮಾಜವಾದಿ ರಾಷ್ಟ್ರಗಳ ಒಂದು ಪ್ರತ್ಯೇಕ ಜಗತ್ತಿದೆ; ಅವರು ನಿಮಗೆ ಸಹಾಯ ಮಾಡಲು ಉತ್ಸುಕರಾಗಿದ್ದಾರೆ. ಆದರೆ ನೀವು ದೊಡ್ಡ ಗುತ್ತೇದಾರಿ ಬಂಡವಾಳಶಾಹಿಗಳೊಡನೆ, ಅಮೆರಿಕನ್ ಸಾಮ್ರಾಜ್ಯಶಾಹಿಗಳೊಡನೆ, ವಿಶ್ವ ಬ್ಯಾಂಕ್ ಮತ್ತು ಇಂಟರ್ ನ್ಯಾಶನಲ್ ಮೊನೆಟರಿ ಫಂಡಿನೊಡನೆ ನಿಮ್ಮನ್ನು ಕಟ್ಟಿಹಾಕಿಕೊಂಡಿದ್ದೀರಿ. ಮತ್ತು ಆ ಕಟ್ಟುಗಳಿಂದ ಬಿಡಿಸಿಕೊಳ್ಳಲಾರಿರಿ. ಬಂಡವಾಳಶಾಹಿ ಜಗತ್ತಿನೊಡನೆ ಹೆಚ್ಚುತ್ತಿರುವ ನಿಮ್ಮ ಅವಲಂಬನೆಯು ನಿಮ್ಮನ್ನು ಇನ್ನೂ ತೀವ್ರವಾದ ಆರ್ಥಿಕ ಬಿಕ್ಕಟ್ಟಿನೆಡೆಗೆ ಒಯ್ಯುತ್ತದೆಂದು ಹೇಳಬಯಸುತ್ತೇನೆ.

ಬಂಡವಾಳಶಾಹಿ ರಾಷ್ಟ್ರಗಳಿಗೆ ತಮ್ಮ ದೇಶಗಳಲ್ಲಿನ ಬಿಕ್ಕಟ್ಟಿನಿಂದ ಪಾರಾಗುವುದು ಅಸಾಧ್ಯವಾದ್ದರಿಂದ ಅವರು ತಮ್ಮೆಲ್ಲಾ ಹೊರೆಯನ್ನು ನಿಮ್ಮ ತಲೆಯ ಮೇಲೆ ಹಾಕಲು ಪ್ರಯತ್ನಿಸುತ್ತಿದ್ದಾರೆ. ಬಹುರಾಷ್ಟ್ರೀಯ ಸಂಸ್ಥೆಗಳಿಗೆ ನಮ್ಮ ದೇಶವನ್ನು ಸೂರೆಗೊಳ್ಳಲು ಅನಿರ್ಬಂಧಿತ ಸ್ವಾತಂತ್ರ್ಯ ನೀಡಲಾಗಿದೆ; ಅವರು ನಮ್ಮ ದೇಶದಿಂದ ಪ್ರತಿ ವರ್ಷವೂ ಕೋಟ್ಯಾನುಕೋಟಿ ಹಣವನ್ನು ಒಯ್ಯುತ್ತಿದ್ದಾರೆ, ಮತ್ತು ಅವರು ಇಲ್ಲಿ ಗಳಿಸುವ ಲಾಭಕ್ಕೆ ಮೇರೆಯೇ ಇಲ್ಲ. ನಿಮ್ಮ ಚುನಾವಣಾ ನಿಧಿಯು ಇವರಿಂದ, ದೊಡ್ಡ ಗುತ್ತೇದಾರಿ ಮನೆತನಗಳಿಂದ, ಈ ವ್ಯಾಪಾರಿಗಳಿಂದ ಮತ್ತು ಲಾಭಕೋರರಿಂದ ಕೊಡಲ್ಪಟ್ಟದ್ದು.

ಅವರಿಗೆ ಪ್ರತಿಫಲ ಬೇಕಾಗಿದೆ. ನೀವು ಅಧಿಕಾರದಲ್ಲಿದ್ದಾಗ ಪ್ರತಿಫಲ ದೊರೆಯುವುದೆಂದು ಅವರಿಗೆ ತಿಳಿದಿದೆ. ಆದ್ದರಿಂದ ಈ ಇಡೀ ಪದ್ಧತಿಯನ್ನೇ ಹಿಂದುಮುಂದಾಗಿಸುವ ಸಾಧ್ಯತೆಯಲ್ಲಿ ಆದ್ದರಿಂದಲೇ, ರಾಷ್ಟ್ರಪತಿಯವರ ಭಾಷಣದಲ್ಲಿ ಹೇಳಿದಂತೆ, ನೀವು ಈ ಗತಿಯನ್ನು ಬದಲಾಯಿಸಲು ಇಚ್ಛಿಸುವುದಾದರೆ, ಈ ಪದ್ಧತಿಯ ಪೂರ್ಣವಾದ ಮತ್ತು ಮೂಲಭೂತವಾದ ಬದಲಾವಣೆಗಳನ್ನು ತರುವ ಅವಶ್ಯಕತೆಯಿದೆ. ಆದರೆ ನೀವು ಹಿಡಿದ ದಾರಿಯಿಂದ ಇದನ್ನು ಸಾಧಿಸಲಾರಿರಿ. ಈ ಎಲ್ಲಾ ಬಂಡವಾಳಶಾಹಿಗಳೊಂದಿಗೆ, ಸ್ಥಾಪಿತ ಹಿತಾಸಕ್ತಿಗಳೊಂದಿಗೆ ನೀವು ನಿಮ್ಮನ್ನು ಕಟ್ಟಿಹಾಕಿಕೊಂಡಿದ್ದೀರಿ. ಇಡಿಯ ಆಡಳಿತ ಮತ್ತು ಪದ್ಧತಿಗಳು ನಿಮ್ಮನ್ನು ಬೇರೆ ಯಾವ ಕಡೆಗೂ ಚಲಿಸಲು ಬಿಡುವುದಿಲ್ಲ. ಇದು ಇನ್ನೂ ದೊಡ್ಡ ಬಿಕ್ಕಟ್ಟಿನೆಡೆಗೆ ಒಯ್ಯಬಹುದೆನ್ನುವುದೇ ನಮಗಿರುವ ಕಾಳಜಿ.

ಈ ಮೊದಲೇ ಹೇಳಿದಂತೆ ಬಿಕ್ಕಟ್ಟು ಆಳವಾಗುತ್ತಿರುವುದು ಪೂರ್ಣಸತ್ಯ. ಈ ಪರಿಸ್ಥಿತಿಗೆ ಕೇವಲ ಜನತಾ ಸರಕಾರದ ಎರಡೂವರೆ ವರ್ಷಗಳ ಆಳ್ವಿಕೆ ಮಾತ್ರ ಕಾರಣವಲ್ಲ; 1947ರಿಂದ ಇಂದಿನವರೆಗೆ ಅನುಸರಿಸಿಕೊಂಡು ಬಂದ ಬಂಡವಾಳಶಾಹಿ ನೀತಿಯೇ ಇದಕ್ಕೆ ಮೂಲ ಕಾರಣ. ಸಮಾಜವಾದಿ ಪದ್ಧತಿಯೇ ನಿಮ್ಮ ಗುರಿಯೆಂದು ನೀವು ಘೋಷಿಸಿದ್ದರೂ, ನೀವು ಅನುಸರಿಸುತ್ತಿರುವ ನೀತಿ ಬಂಡವಾಳಶಾಹಿ ಪದ್ಧತಿಯನ್ನು ಭದ್ರಗೊಳಿಸುತ್ತಿದೆ. ಸಮಾಜವಾದವೆಂದರೇನು? ಜಗತ್ತಿನಲ್ಲಿ ಈಗಾಗಲೇ ಸಮಾಜವಾದಿ ಪದ್ಧತಿಯನ್ನು ಕಟ್ಟಿದ ಅನೇಕ ರಾಷ್ಟ್ರಗಳಿವೆ ಮತ್ತು ಅವು ತಮ್ಮ ಜನರ ಮೂಲ ಸಮಸ್ಯೆಗಳನ್ನು ಬಗೆಹರಿಸಿಕೊಂಡಿವೆ. ಅಲ್ಲಿ ನಿರುದ್ಯೋಗ, ಬಡತನ, ಬೆಲೆಯೇರಿಕೆ ಮುಂತಾದ ಸಮಸ್ಯೆಗಳಿಲ್ಲ, ನೀವು ಚೀನಕ್ಕೆ ಹೋಗಿ ಅಲ್ಲಿನ ಆರ್ಥಿಕ ವ್ಯವಸ್ಥೆಯನ್ನು ಅಭ್ಯಾಸ ಮಾಡಿರಿ.

ಕಳೆದ ಲೋಕಸಭೆಯಲ್ಲಿ ನಾನು ಎಲ್ಲಾ ಸಮಾಜವಾದಿ ರಾಷ್ಟ್ರಗಳ ಸಾಧನೆಗಳನ್ನು ಓದಿದ್ದೆ. ಸಮಾಜವಾದಿ ದೇಶಗಳಲ್ಲಿ ಕೆಲಸ ಕೊಡಿಸುವ ಹಕ್ಕು ಮೂಲಭೂತ ಹಕ್ಕಾಗಿ ಸಂವಿಧಾನದಲ್ಲಿ ಅಡಕವಾಗಿದೆ. ನೀವು ಆಸ್ತಿ ಹಕ್ಕನ್ನು ಮೂಲಭೂತವೆಂದು ಪರಿಗಣಿಸಿದ್ದೀರಿ ಕೆಲಸದ ಹಕ್ಕನ್ನು ಮೂಲಭೂತ ಹಕ್ಕಾಗಿ ಪರಿವರ್ತಿಸುವ ಸಂವಿಧಾನದ ತಿದ್ದುಪಡಿ ಮಸೂದೆಯನ್ನು ತನ್ನಿರಿ.

ಈಗ ಸ್ಥಿರತೆಯ ಪ್ರಶ್ನೆಯನ್ನು ನೋಡೋಣ. ನಿಮ್ಮ ಸ್ಥಿರ ಸರಕಾರವೊಂದು ಅಸ್ತಿತ್ವಕ್ಕೆ ಬಂದಿದೆಯೆಂದು ನೀವು ಬರೆದಿದ್ದೀರಿ. 1971ರಲ್ಲಿಯೂ ಸ್ಥಿರತೆಯಿತ್ತು. ಆದರೆ ಅದು ಪೂರ್ಣವಾಗಿ ನಾಶವಾಯಿತು, ಅದು ಯಾಕೆ? ಬಹುಮತವೆಂದರೆ ಸ್ಥಿರತೆಯೆಂಬ ಭರವಸೆಯೆಲ್ಲಿದೆ? ರಾಜಕೀಯದಲ್ಲಿ ನೈತಿಕತೆಯು ಎಷ್ಟು ಕೆಳಮಟ್ಟಕ್ಕೆ ಇಳಿದಿದೆಯೆಂದರೆ ನಿಮಗೆ ಬೆಂಬಲವೀಯುವ ಲೋಕಸಭಾ ಸದಸ್ಯರ ಪೈಕಿ ಬಹುಮಂದಿ ಯಾವಾಗಲೆಂದರೆ ಆಗ ಪಕ್ಷಾಂತರ ಮಾಡಬಹುದು. ಸಾಧಾರಣವಾಗಿ ಯಾರನ್ನೂ ಈಗ ಕೊಂಡುಕೊಳ್ಳಬಹುದು. ಇದು ವಿಭಿನ್ನ ರಾಜಕೀಯ ಪಕ್ಷಗಳ ಅಸ್ಥಿರತೆಯನ್ನು ತೋರಿಸುತ್ತದೆ

ಆರ್ಥಿಕ ಬಿಕ್ಕಟ್ಟು ಮತ್ತು ಸ್ಥಿರತೆ – ಇವುಗಳ ನಡುವೆ ಇರುವ ಸಂಬಂಧವನ್ನೂ ಅಲ್ಲಗೆಳೆಯುವಿರಾ? ನೀವು ಆರ್ಥಿಕ ಬಿಕ್ಕಟ್ಟನ್ನೂ, ನಿರುದ್ಯೋಗವನ್ನೂ ಮತ್ತು ಬಡತನವನ್ನೂ ಪರಿಹರಿಸಬಲ್ಲವರಾದರೆ ಸ್ಥಿರತೆಯನ್ನು ಪಡೆಯಬಹುದು. ಆದರೆ ನೀವು ಬಂಡವಾಳಶಾಹಿ ಪದ್ಧತಿಯನ್ನೇ ಅನುಸರಿಸುತ್ತಾ ಹೋದರೆ, ಬಿಕ್ಕಟ್ಟು ತೀವ್ರವಾಗುವುದರಲ್ಲಿ ಸಂದೇಹವಿಲ್ಲ ಮತ್ತು ಚಳುವಳಿಯಿಲ್ಲದೆ ಜನರಿಗೆ ಬೇರೆ ದಾರಿಯಿಲ್ಲ. ಆಗ ಕಾನೂನು ಮತ್ತು ಶಿಸ್ತಿನ ಸಮಸ್ಯೆ ಏಳುತ್ತದೆ. ನೀವು ಆಗ ದಬ್ಬಾಳಿಕೆಗೆ ತೊಡಗುವಿರಿ. ಸ್ವಲ್ಪ ಸಮಯಾನಂತರ ಆಂತರಿಕ ತುರ್ತುಪರಿಸ್ಥಿತಿಯ ಪ್ರಶ್ನೆ ಪುನಃ ಏಳುವುದು.

ಇದೇ ಸರ್ವಾಧಿಕಾರಕ್ಕೆ ನಾಂದಿಯಾಗುತ್ತದೆ. ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಬಂಡವಾಳಶಾಹಿ ಶೋಷಣೆ ಮತ್ತು ಪಾಳೆಯಗಾರಿ ಶೋಷಣೆಗಳೇ ಸರ್ವಾಧಿಕಾರದ ಆರ್ಥಿಕ ನೆಲೆಗಳಾಗಿವೆ. ಅವುಗಳನ್ನು ಕಿತ್ತೆಸೆಯದೆ ಪ್ರಜಾಸತ್ತೆಯ ರಕ್ಷಣೆ ನಮ್ಮಿಂದ ಸಾಧ್ಯವಿಲ್ಲ. ಬಹುಮತೀಯರ ಆಳ್ವಿಕೆಯೇ ಪ್ರಜಾಪ್ರಭುತ್ವ ನಮ್ಮ ದೇಶದ ಬಹುಸಂಖ್ಯಾತ ಜನರು ಅತೀವ ಬಡತನ ಮತ್ತು ನಿರುದ್ಯೋಗಗಳಿಂದ ಬಳಲುತ್ತಿದ್ದಾರೆ. ಈ ಮೂಲಭೂತ ಸಮಸ್ಯೆಗಳು ಪರಿಹಾರವಾಗದೇ ಯಾವ ಪ್ರಜಾಸತ್ತೆಯೂ ಸ್ಥಿರವಾಗಿ ಉಳಿಯಲಾರದು.

ಈ ಸರಕಾರದ ಹಿಂದಿನ ಸಾಧನೆಗಳನ್ನು ಗಮನದಲ್ಲಿಟ್ಟುಕೊಂಡು ಶೇ. 57ರಷ್ಟು ಮತದಾರರು ನಿಮ್ಮ ವಿರುದ್ಧ ಮತ ನೀಡಿರುವಾಗ ಮತ್ತು ಬರೇ ಶೇ. 43ರಷ್ಟು ಜನರು ಮಾತ್ರ ನಿಮ್ಮ ಪರವಾಗಿ ಮತ ನೀಡಿರುವಾಗ ನೀವು ವಿನಯಶೀಲರಾಗಬೇಕೆಂದು ಹೇಳುತ್ತೇನೆ; ಅಧಿಕಾರಕ್ಕೆ ಬಂದ ಈ ಸಂದರ್ಭದಲ್ಲಿ ಇಡೀ ವ್ಯವಸ್ಥೆಯ ಬಗ್ಗೆ ಮತ್ತು ನಿಮ್ಮ ಭೂತಕಾಲದ ಬಗ್ಗೆ ಪುನರಾಲೋಚಿಸುವುದು ಅಗತ್ಯ. ಅದಕ್ಕೆ ಆತ್ಮವಿಮರ್ಶೆ ಮಾಡಿಕೊಳ್ಳುವ ಮನೋಭಾವವಿರಬೇಕು.

ಒಂದೆಡೆ ನೀವು ನಮ್ಮ ಸಹಕಾರವನ್ನು ಯೋಚಿಸುತ್ತಿದ್ದೀರಿ. ನಿಮ್ಮ ಈ ನೀತಿ ನಮಗೆ ಹೊಸತೇನೂ ಅಲ್ಲ. 1959ರಲ್ಲಿ ಕೇರಳ ಸರಕಾರವನ್ನು ಉರುಳಿಸಲು "ವಿಮೋಚನಾ ಸಮರ" ನಡೆಸಲಾಯಿತು. ಆ ಸರಕಾರವನ್ನು ಉರುಳಿಸಲು ಅಮೇರಿಕಾದಿಂದ ಹಣ ಬಂದಿತ್ತೆಂದು ಮೈನಿಹಾನ್ ತಮ್ಮ ಪುಸ್ತಕದಲ್ಲಿ ಬರೆದಿದ್ದಾರೆ.

ಶ್ರೀಮತಿ ಇಂದಿರಾಗಾಂಧಿ : ಅಧ್ಯಕ್ಷರೇ ನಾನೂ ಒಂದು ಮಾತನಾಡಲೇ? ಇದನ್ನು ಪತ್ರಕರ್ತರ ಸಮ್ಮೇಳನದಲ್ಲಿ ಮೈನಿಹಾನ್ ಅಲ್ಲಗಳೆದಿದ್ದಾರೆ. ಅವರನ್ನು ಪ್ರಶ್ನಿಸಿದಾಗ, "ತಾನು ಹಾಗೆ ಆಲೋಚಿಸಿರುವುದಾಗಿ" ಅವರು ಹೇಳಿದರು.

ಶ್ರೀ ಸಮರ್‌ಮುಖರ್ಜಿ : ನಾನು ನಿಮ್ಮ ಹೆಸರು ಎತ್ತಲಿಲ್ಲ.

ಶ್ರೀಮತಿ ಗಾಂಧಿ : ಆದರೆ ಕಾಂಗ್ರೆಸ್ಸಿಗೆ ಹಣ ಬಂದಿತ್ತೆಂದು ಅವರು ಹೇಳಿದ್ದರು.

ಶ್ರೀ ಸಮರ್ ಮುಖರ್ಜಿ : ನಿಮ್ಮ ಪಕ್ಷ ಹಣ ಪಡೆದಿದೆ.

ಶ್ರೀಮತಿ ಗಾಂಧಿ : ಆದರೆ ಅದನ್ನು ಯಾವ ರೀತಿಯಲ್ಲಿಯೂ ರುಜುವಾತುಪಡಿಸಲು ಅವರಿಂದ ಸಾಧ್ಯವಾಗಲಿಲ್ಲ. ಈಗ ಅವರೇ ಈ ದೇಶದಲ್ಲಿ ಅಮೇರಿಕಾದ ಹಸ್ತಕ್ಷೇಪದ ವಿರುದ್ಧ ಪ್ರತಿಭಟಿಸುತ್ತಿದ್ದಾರೆ.

ಶ್ರೀ ಸಮರ್ ಮುಖರ್ಜಿ : ಆದರೆ 1971ರಲ್ಲಿ ಪಶ್ಚಿಮ ಬಂಗಾಳದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಸರಕಾರವನ್ನು ಉರುಳಿಸುವ ಸಲುವಾಗಿ ಮತ್ತು ತನ್ಮೂಲಕ ಅಲ್ಲಿ ಆರಿಸಿ ಬರುವುದಕ್ಕಾಗಿ ಮತ್ತೊಮ್ಮೆ ಹಣ ಪಡೆಯಲಾಗಿತ್ತು. ಆದ್ದರಿಂದ ನಮಗೆ ಇದರ ಸಂಪೂರ್ಣ ಹಿನ್ನೆಲೆ ತಿಳಿದಿದೆ. ಶ್ರೀ ಮೈನಿಹಾನ್ ನಿಮ್ಮ ಪಕ್ಷಕ್ಕೆ ಹಣ ಕೊಟ್ಟಿದ್ದಾರೆ.

ನಮ್ಮ ಹಣ ಜನರಿಂದಲೇ ಸಂಗ್ರಹಿಸಲ್ಪಟ್ಟಿದೆ ಎಂಬ ವಿಚಾರ ಎಲ್ಲರಿಗೂ ತಿಳಿದಿದೆ. ನಮಗೆ ಸರಕಾರಗಳನ್ನು ಉರುಳಿಸುವುದು ಏನೆಂದು ಗೊತ್ತು. ನಾನು ನಿಮಗೆ ಹೇಳುತ್ತಿರುವ ಹಿನ್ನೆಲೆ ಇದು. ಕ್ಷೋಭೆಯುಂಟುಮಾಡುವ ಕಾನೂನು ಮತ್ತು ಶಿಸ್ತು ಹಾಳಾಗಿದೆಯೆಂದು ಗವರ್ನರರಿಂದ ವರದಿ ಕೊಡಿಸುವ ನಿಮ್ಮ ಎಲ್ಲಾ ಈ ಹಳೇ ಆಟಗಳೂ, ತಂತ್ರಗಳೂ ನಮಗೆ ತಿಳಿದಿವೆ. ಈ ರೀತಿ ಮಾಡುವುದರಿಂದ ಪ್ರಜಾಸತ್ತೆ ಬಲಗೊಳ್ಳುವುದಿಲ್ಲ. ನೀವು ರಾಜ್ಯಸರಕಾರಗಳ ಸ್ಥಿರತೆಯನ್ನು ಹಾಳುಮಾಡಲೆತ್ನಿಸಿದರೆ, ನಿಮ್ಮ ಸ್ಥಿರತೆ ಖಂಡಿತವಾಗಿಯೂ ಉಳಿಯುವುದಿಲ್ಲ. ಇದು ಅಸ್ಥಿರತೆ ಉಂಟುಮಾಡುವುದು ಮತ್ತು ನಿಮ್ಮ ಸ್ಥಿರತೆಯ ಮಧ್ಯೆ ಇರುವ ನೇರ ಸಂಬಂಧ. ಇವು ನಾನು ಹೇಳುವ ಅತಿ ಕಠಿಣವಾದ ಮಾತುಗಳು. ನೀವು ಈ ವಿಚಾರಗಳ ಬಗ್ಗೆ ಆಲೋಚಿಸುವಿರೆಂದು ಭಾವಿಸುತ್ತೇನೆ.

ಈಗ ನೀವೊಂದು ಹೊಸ ಸರಕಾರವನ್ನು ಆರಂಭಿಸಿದ್ದೀರಿ. ನೀವು ಮಾಡುವ ಯಾವುದೇ ಒಳ್ಳೆಯ ಕೆಲಸಕ್ಕೆ ನಮ್ಮ ಸಹಕಾರವಿದೆ. ಆದರೆ ನೀವು ತುಳಿಯುತ್ತಿರುವ ದಾರಿಯಿಂದ ನೀವು ನಿಮ್ಮ ಹಳೆಯ ಆಟವನ್ನೇ ಆಡುವಂತೆ ಕಾಣುತ್ತದೆ ಮತ್ತು ಅದು ನಿಮ್ಮನ್ನು ಈ ಹಿಂದೆ ಯಾವ ಪರಿಣಾಮದೆಡೆಗೆ ಒಯ್ದಿತ್ತೋ ಅಲ್ಲಿಗೆ ಒಯ್ಯುವುದು ಆದ್ದರಿಂದಲೇ ಈ ವಿಚಾರಗಳಲ್ಲಿ ಜಾಗರೂಕರಾಗಿರುವಂತೆ ಸರಕಾರವನ್ನು ಎಚ್ಚರಿಸುತ್ತಿದ್ದೇನೆ.

ಬರೇ ಶೇ. 43ರಷ್ಟು ಮತಗಳು ಮತ್ತು ಶೇ. 68.69 ರಷ್ಟು ಸ್ಥಾನಗಳನ್ನು ಪಡೆದು ನೀವು ಹಿಗ್ಗಿರಬಹುದು. ಆದರೆ ಅದು ಜನರ ನಿಜವಾದ ಆಶೋತ್ತರಗಳನ್ನು ಪ್ರತಿಬಿಂಬಿಸುವುದಿಲ್ಲ. ಚುನಾವಣಾ ನಿಬಂಧನೆಗಳಲ್ಲಿ ಆಮೂಲಾಗ್ರ ಬದಲಾವಣೆಗಳಾಗಬೇಕೆಂದೂ, ಪ್ರಮಾಣಾನುಗುಣ ಪ್ರಾತಿನಿಧ್ಯ (productional representation)ಇರಬೇಕೆಂದೂ ಮತ್ತು ಹಿಂದೆ ಕರೆಸಿಕೊಳ್ಳುವ ಹಕ್ಕು ಮತದಾರರಿಗೆ ಇರಬೇಕೆಂದು ನಾವು ಪದೇ ಪದೇ ಕೇಳಿದ್ದೇವೆ-ಕೇಳುತ್ತಿದ್ದೇವೆ. ಅದು ನಿಜವಾದ ಪ್ರಜಾಪ್ರಭುತ್ವ. ಆದರೆ ಅದು ಯಾವತ್ತೂ ಸ್ವೀಕೃತವಾಗಲಿಲ್ಲ. ನೀವು ಕೆಲವೊಮ್ಮೆ ಇದರ ಲಾಭಪಡೆಯುವಲ್ಲಿ ಸಫಲರಾದರೂ, ಶೇ. 57ರಷ್ಟು ಮತದಾರರು ಒಂದಾದಾಗ ಈ ಲಾಭವು ನಿಮ್ಮ ವಿರುದ್ಧ ಹೋಗುವುದು ಖಂಡಿತ.

o

‘ಗುಂಡೂರಾಯರ ಕಾಸರಗೋಡು “ಕಳಕಳಿ” ಕೇವಲ ಅಗ್ಗದ ಪ್ರಚಾರಕ್ಕಾಗಿ ಅಷ್ಟೇ’

ಕಾಸರಗೋಡನ್ನು ಕರ್ನಾಟಕ ರಾಜ್ಯಕ್ಕೆ ಸೇರಿಸಿಕೊಳ್ಳಬೇಕು. ಇದು ರಾಜ್ಯ ಮುಖ್ಯಮಂತ್ರಿ ಶ್ರೀ ಗುಂಡೂರಾಯರ ಇತ್ತೀಚಿನ ಪ್ರಲಾಪ. ಗುಂಡೂರಾವ್ ಅವರ ಈ ಕಾಸರಗೋಡು ‘ಕಳಕಳಿ’ಯನ್ನು ಕೇವಲ ಅಗ್ಗದ ಪ್ರಚಾರ ಎಂದು ಬಣ್ಣಿಸಿದರು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ನಾಯಕ ಹಾಗೂ ಲೋಕಸಭಾ ಸದಸ್ಯ ಕಾಂ. ರಾಮಣ್ಣ ರೈ.

ಕರ್ನಾಟಕ ಮತ್ತು ಕೇರಳದಲ್ಲಿ ಇಂದಿರಾ ಕಾಂಗ್ರೆಸ್ ಪಕ್ಷದ ಸರಕಾರವಿದ್ದಾಗ ಕಾಸರಗೋಡಿನ ಬಗ್ಗೆ ಸೊಲ್ಲೆತ್ತದಿದ್ದ ಗುಂಡೂರಾಯರು, ಕೇರಳದಲ್ಲಿ ಈಗ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ನೇತೃತ್ವದ ಎಡ-ಪ್ರಜಾಪ್ರಭುತ್ವವಾದಿ ಸರಕಾರ ಬಂದಿರುವಾಗ ಗಡಿ ಪ್ರಶ್ನೆ ಎತ್ತಿರುವುದು ರಾಜಕೀಯವಲ್ಲದೆ ಮತ್ತೇನು ಎಂದು ಫೆ 17ರಂದು ಬೆಂಗಳೂರಿನಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಪ್ರಶ್ನಿಸಿದರು ಕಾಂ. ರಾಮಣ್ಣ ರೈ.

‘ಮಣ್ಣಿನ ಮಕ್ಕಳಿಗೆ’ ಮಾತ್ರ ಸರಕಾರಿ ಕೆಲಸ ಎಂಬ ಗುಂಡೂರಾಯರ ಹೇಳಿಕೆಯನ್ನು ಪ್ರಸ್ತಾಪಿಸಿದ ಕಾಂ. ರೈ, ಈ ಮಣ್ಣಿನ ಮಕ್ಕಳ ವಾದ ಮೊದಲು ಶುರುವಾಗಿದ್ದು ಮಹಾರಾಷ್ಟ್ರದ ಶಿವಸೇನೆಯವರಿಂದ ಎಂದು ಹೇಳಿ ಶಿವಸೇನೆಯವರಿಗೆ ಕನ್ನಡಿಗರು, ಕೇರಳಿಯರು, ತಮಿಳರು. ತೆಲಗರು ಮತ್ತು ಹಿಂದಿ ಮಾತನಾಡುವವರೂ ತಮ್ಮ ಪ್ರತಿಭಟನೆ ತೋರಿಸಿದರು ಎಂದು ಜ್ಞಾಪಿಸಿಕೊಟ್ಟರು. ಮಣ್ಣಿನ ಮಕ್ಕಳಿಗೆ ಮಾತ್ರ ಸರಕಾರಿ ಕೆಲಸ ಎಂಬ ವಾದವನ್ನು ಎಲ್ಲ ರಾಜ್ಯಗಳವರೂ ಕಟ್ಟುನಿಟ್ಟಾಗಿ ಪಾಲಿಸ ಹೊರಟರೆ ದೇಶದ ಭಾವೈಕ್ಯತೆಗೆ ಧಕ್ಕೆ ಬರುವುದಿಲ್ಲವೆ ಎಂದೂ ಸಹ ರಾಮಣ್ಣ ರೈ ಪ್ರಶ್ನಿಸಿದರು,

o

ಆರ್ಥಿಕ ಸಮೀಕ್ಷೆ

[3ನೇ ಪುಟದಿಂದ]

ಆದುದರಿಂದ ಆರ್ಥಿಕ ದುಃಸ್ಥಿತಿಗೆ ಕಾರ್ಮಿಕರ ಅಶಿಸ್ತು, ಮುಷ್ಕರ, ಹೋರಾಟಗಳು ಕಾರಣ ಎನ್ನುವುದರಲ್ಲಿ ಹುರುಳಿಲ್ಲ. ಇದು ಅಪಪ್ರಚಾರ ಮತ್ತು ಸಮಸ್ಯೆಯನ್ನು ಬುಡಮೇಲೆ ತಳೆಕೆಳಗೆ ಆಗಿ ನೋಡಿದಂತೆ! ಕಾರ್ಮಿಕರ ಹೋರಾಟಗಳು ಹಣದುಬ್ಬರ, ಆರ್ಥಿಕ ಹಿಂಜರಿತದಿಂದ ತಮ್ಮ ವೇತನ ಹಾಗೂ ಜೀವನ ಮಟ್ಟವನ್ನು ರಕ್ಷಿಸಿಕೊಳ್ಳುವ ಪ್ರತಿಕ್ರಿಯೆಗಳಾಗಿವೆ. ಅವರ ಹೋರಾಟಗಳು, ಅವಕಾಶ ಇದ್ದಾಗಲೆಲ್ಲಾ ತಮ್ಮ ಉತ್ಪಾದನೆಯಲ್ಲಿ ಸ್ವಲ್ಪಾಂಶವನ್ನಾದರೂ ವೇತನದ ರೂಪದಲ್ಲಿ, ಸೌಕರ್ಯ ಸೌಲಭ್ಯಗಳ ರೂಪದಲ್ಲಿ ಪಡೆಯುವ ಪ್ರಯತ್ನಗಳಾಗಿವೆ. ಈಗ ಹಣದುಬ್ಬರ, ಆರ್ಥಿಕ ಹಿಂಜರಿತವಿದ್ದು, ಕಾರ್ಮಿಕ ಹೋರಾಟಗಳು ಹೆಚ್ಚುತ್ತಿದ್ದಾಗ, ತುರ್ತುಪರಿಸ್ಥಿತಿಯ ಕಾಲದಂತೆಯೇ ಪುನಃ ಕಾರ್ಮಿಕರ ಮೇಲೆ ಶಿಸ್ತು ಕ್ರಮ ಕೈಗೊಂಡರೆ ಸ್ವಲ್ಪ ಕಾಲ ಅವರ ಸದ್ದಡಗಿಸಬಹುದಾದರೂ, ಅಂತಹ ಶಾಂತಿಯು ಕ್ಷಣಿಕವೂ ಬೂದಿಮುಚ್ಚಿದ ಕೆಂಡದಂತೆಯೂ ಆದೀತು. ಯಾವ ಘಳಿಗೆಯಲ್ಲಿಯೂ ಕಾರ್ಮಿಕರು ಪುನಃ ಸಂಘಟಿತರಾಗಿ ಭಾರೀ ಹೋರಾಟಗಳು ಅವಕಾಶ ಸಿಕ್ಕಿದಾಗ ಭುಗಿಲೇಳಬಹುದು, ಆಗ ಆರ್ಥಿಕ ದುಃಸ್ಥಿತಿಯೊಂದಿಗೇ, ರಾಜಕೀಯ ಅಸ್ಥಿರತೆಯೂ ಉಂಟಾಗಬಹುದು!

1979ರಲ್ಲಿ 50 ಮಿಲಿಯ ಕೆಲಸದ ದಿನಗಳು ಕೈಗಾರಿಕೆಗಳಲ್ಲಿ ನಷ್ಟವಾಗಿವೆ ಎಂದು ಹೇಳಲಾಗುತ್ತಿದೆ. ಆದರೆ, ರಾಷ್ಟ್ರೀಯ ಆರ್ಥಿಕ ಚಟುವಟಿಕೆಯ ಒಟ್ಟು ವಾರ್ಷಿಕ ಕೆಲಸದ ದಿನಗಳಲ್ಲಿ ಇದು ಕೇವಲ ಶೇ. 0 05 ರಷ್ಟು. ಕೈಗಾರಿಕೆಗಳಲ್ಲಿ ಕೆಲಸದ ದಿನಗಳಷ್ಟಕ್ಕೆ ಮುಷ್ಕರಗಳೇ ಕಾರಣವಲ್ಲ. ಲಾಕ್ ಔಟ್, ಲೇಆಫ್‌ಗಳೂ ಕಾರಣ, ಅಂದರೆ ಕೈಗಾರಿಕೋದ್ಯಮಿಗಳೂ ಕಾರಣ. ತುರ್ತುಪರಿಸ್ಥಿತಿಯಲ್ಲಿ ಕೈಗಾರಿಕೆಗಳಲ್ಲಿ ಕೆಲಸದ ದಿನಗಳ ನಷ್ಟಕ್ಕೆ ಕಾರ್ಮಿಕರಿಗಿಂತಲೂ ಹೆಚ್ಚಾಗಿ ಕೈಗಾರಿಕೋದ್ಯಮಿಗಳೇ ಕಾರಣರಾಗಿದ್ದರು. ಇಷ್ಟೆಲ್ಲಾ ಹೋರಾಟ ಮಾಡಿದರೂ ಕೈಗಾರಿಕಾ ಕಾರ್ಮಿಕರು 1960ರ ದಶಕದ ಮಧ್ಯ ಕಾಲದಿಂದ ತಮ್ಮ ನಿಜವಾದ ವೇತನ ಮಟ್ಟವನ್ನು ಕಾಪಾಡಿಕೊಳ್ಳಲು ಸಂಪೂರ್ಣ ಯಶಸ್ವಿಯಾಗಲಿಲ್ಲ. ಇನ್ನು ಗ್ರಾಮೀಣ ಹಾಗೂ ನಗರಗಳ ಅಸಂಘಟಿತ ಕಾರ್ಮಿಕರು ವರ್ಷ ವರ್ಷಕ್ಕೂ ಬಡತನ ರೇಖೆಗಿಂತಲೂ ಕೆಳಗೆ ನೂಕಲ್ಪಡುತ್ತಿದ್ದಾರೆ. ಅಂತಹ ಬಡವರನ್ನೂ, ನಿರುದ್ಯೋಗಿಗಳನ್ನೂ, ಅರೆ ಉದ್ಯೋಗಿಗಳನ್ನೂ ಶೋಷಿಸಿ, ವೇತನ ಅಸಮಾನತೆಯನ್ನು ಹೋಗಲಾಡಿಸುವ ನೆಪದಿಂದ ಸಂಘಟಿತ ಕಾರ್ಮಿಕರ ಹೋರಾಟವನ್ನು ಹತ್ತಿಕ್ಕಲು, ಅವರ ವೇತನ ಸ್ಥಗಿತಗೊಳಿಸಲು, ಕಡಿತಗೊಳಿಸಲು ಪ್ರಯತ್ನಿಸಲಾಗುತ್ತಿದೆ. ಕಾರಣ, ಅನಿವಾರ್ಯವಾಗಿ ಕಾರ್ಮಿಕರು ತಮ್ಮ ಹೋರಾಟವನ್ನು ಹರಿತಗೊಳಿಸಬೇಕಾಗುತ್ತದೆ. ಕಾರಣ, ಅವರಿಗೆ ಚೆನ್ನಾಗಿ ಗೊತ್ತಿದೆ, ಮೂವತ್ತು ವರುಷಗಳ ಕಾಂಗ್ರೆಸ್ ಆಡಳಿತದಲ್ಲಿಯೂ, ಮೂವತ್ತು ತಿಂಗಳ ಜನತಾ-ಲೋಕದಳ ಆಡಳಿತದಲ್ಲಿಯೂ 'ಸಮಾಜವಾದ'ದ ಹೆಸರಿನಲ್ಲಿ ಆಸ್ತಿ ಆದಾಯ ಬೆಳೆಸಿಕೊಂಡವರು ಭೂಮಾಲಕರು, ವ್ಯಾಪಾರಸ್ಥರು, ಕೈಗಾರಿಕೋದ್ಯಮಿಗಳು, ಗುತ್ತೇದಾರಿ ಬಂಡವಾಳಗಾರರು, ಮತ್ತು ವಿದೇಶಿ ಬಂಡವಾಳಗಾರರು ಎಂದು.

ಆರ್ಥಿಕ ದುಃಸ್ಥಿತಿಯ ವಿಷ ವರ್ತುಲ

ಕಾರ್ಮಿಕರ ವೇತನ ಮಟ್ಟವು ಸ್ಥಗಿತಗೊಂಡರೆ, ಇನ್ನಷ್ಟೂ ಕಡಿತಗೊಂಡರೆ, ಆಂತರಿಕ ಮಾರುಕಟ್ಟೆ ಕುಸಿದು ಆರ್ಥಿಕ ಹಿಂಜರಿತ ಹೆಚ್ಚುವುದು. ಕೈಗಾರಿಕೋದ್ಯಮಿಗಳ ಸಲಹೆಯಂತೆ ಶ್ರೀಮಂತರ, ಕಂಪೆನಿಗಳ ಆದಾಯ ತೆರಿಗೆ ಕಡಿಮೆ ಮಾಡಿದರೆ, ಆರ್ಥಿಕ ಅಭಿವೃದ್ಧಿಗೆ ಸರಕಾರ ಇನ್ನಷ್ಟು ಆವಶ್ಯಕ ಸಾಮಗ್ರಿಗಳ ಮೇಲೆ ಅಪ್ರತ್ಯಕ್ಷ ತೆರಿಗೆ ವಿಧಿಸಬೇಕಾಗುವುದು, ಕೊರತೆ ಹಣ ಸೃಷ್ಟಿಸಬೇಕಾಗುವುದು, ದೇಶವಿದೇಶಗಳಿಂದ ಸಾಲ ಹೆಚ್ಚು ಪಡೆಯಬೇಕಾಗುವುದು. ಇದರಿಂದ ಹಣದುಬ್ಬರ ಇನ್ನಷ್ಟೂ ಹೆಚ್ಚುವುದು. ಸಾರ್ವಜನಿಕ ಕ್ಷೇತ್ರದಲ್ಲಿ ಸರಕಾರ ಬಂಡವಾಳ ಹೂಡುವುದನ್ನು ಕಡಿಮೆ ಮಾಡಿ ಖಾಸಗೀ ಕ್ಷೇತ್ರಕ್ಕೆ ಅನಿರ್ಬಂಧಿತವಾಗಿ ಅಭಿವೃದ್ಧಿ ಮಾಡಲು ಅವಕಾಶ ಕೊಟ್ಟರೆ, ರಾಷ್ಟ್ರೀಯ ಅಗತ್ಯತೆಗಳಿಗನುಗುಣವಾಗಿ ಆರ್ಥಿಕ ಅಭಿವೃದ್ಧಿಯು ಸಾಗದೆ, ಕೆಲವೇ ಶ್ರೀಮಂತರ ಅಗತ್ಯತೆಗಳನ್ನು ಪೂರೈಸಲು ಕೈಗಾರಿಕೋತ್ಪಾದನೆ ಮೀಸಲಾಗಿರುವಂತಾಗುವುದು. ಹಣದುಬ್ಬರ, ಆರ್ಥಿಕ ಹಿಂಜರಿತದಿಂದ ಆಂತರಿಕ ಮಾರುಕಟ್ಟೆ ಕ್ಷಯಿಸುತ್ತಿರುವಾಗ ರಫ್ತು ವ್ಯಾಪಾರಕ್ಕೆ ಪ್ರೋತ್ಸಾಹ, ಧನಸಹಾಯ ನೀಡುವುದರಿಂದ, ದೇಶದ ಸಂಪನ್ಮೂಲಗಳನ್ನು ಪೋಲುಮಾಡಿದಂತಾಗುವುದು ಮತ್ತು ವಿದೇಶಗಳ ಮೇಲಿನ ಅವಲಂಬನೆ ಹೆಚ್ಚುವುದು. ರಫ್ತು ವ್ಯಾಪಾರದ ಮೂಲಕ ಲಾಭ ಗಿಟ್ಟಿಸುವ ಬಂಡವಾಳಗಾರರ ಯೋಜನೆಯೂ ಫಲಕಾರಿಯಾಗದು. ಕಾರಣ, ಜಾಗತಿಕ ಬಂಡವಾಳಶಾಹಿ ಪದ್ಧತಿಯೇ ಮಾರುಕಟ್ಟೆಯ ಅಭಾವದಿಂದ ಕುಸಿಯುತ್ತಿರುವಾಗ, ತಮ್ಮ ಸಾಲ ಸಹಾಯಗಳಿಂದ ಅಭಿವೃದ್ಧಿ ಹೊಂದುತ್ತಿರುವ ಭಾರತದಂತಹ ದೇಶಗಳಲ್ಲಿ ವಿದೇಶಿ ಬಂಡವಾಳಗಾರರು ತಮ್ಮ ಮಾರುಕಟ್ಟೆಯನ್ನು ವಿಸ್ತರಿಸಲು ಪೈಪೋಟಿ ನಡೆಸುತ್ತಿರುವರು! ಕೈಗಾರಿಕೋದ್ಯಮಿಗಳ ಸಲಹೆಗಳಿಗೆ ಸರಕಾರ ಕಿವಿಗೊಟ್ಟರೆ, ದೇಶದ ಆರ್ಥಿಕ ವ್ಯವಸ್ಥೆಯು ಹಣದುಬ್ಬರ, ಆರ್ಥಿಕ ಹಿಂಜರಿತ, ನಿರುದ್ಯೋಗ, ಬಡತನ, ಮುಂತಾದ ವಿಷವರ್ತುಲಗಳಲ್ಲಿ ಸಿಲುಕಿ ಆರ್ಥಿಕ ದುಃಸ್ಥಿತಿಯು ತೀವ್ರವಾಗುವುದರಲ್ಲಿ ಸಂಶಯವಿಲ್ಲ.

○

ಆಟೋರಿಕ್ಷಾ ಚಾಲಕರ ಸಮ್ಮೇಳನಕ್ಕೆ ಸಿದ್ಧತಾ ಸಭೆ

ಬೆಂಗಳೂರು ನಗರ ಆಟೋರಿಕ್ಷಾ ಚಾಲಕರ ಸಂಘದ ಆಶ್ರಯದಲ್ಲಿ ನಗರ ಆಟೋರಿಕ್ಷಾ ಚಾಲಕರ ಸಮ್ಮೇಳನಕ್ಕೆ ಸಿದ್ಧತಾ ಸಭೆಯು ನಗರದ ನ್ಯೂ ಕೃಷ್ಣ ಭವನದಲ್ಲಿ ತಾ|| 12-2-80 ರಂದು ನಡೆಯಿತು. ಈ ಸಭೆಗೆ ಲೋಕಸಭೆಯಲ್ಲಿ ಸಿ. ಪಿ. ಐ (ಎಂ) ಪಕ್ಷದ ನಾಯಕರಾದ ಕಾಂ. ಸಮರ್ ಮುಖರ್ಜಿಯವರು ವಿಶೇಷ ಆಹ್ವಾನಿತರಾಗಿ ಬಂದಿದ್ದರು. ಈಗಿನ ಬಂಡವಾಳಶಾಹಿ ಆಡಳಿತ ಪದ್ಧತಿಯಲ್ಲಿ ದುಡಿಯುವ ಜನತೆಗೆ ನ್ಯಾಯ ದೊರೆಯಬೇಕಾದರೆ ದುಡಿಯುವ ಜನರೆಲ್ಲಾ ಸಂಘಟಿತರಾಗಿ ನ್ಯಾಯಕ್ಕಾಗಿ ಹೋರಾಡಬೇಕಾದ ಅಂಶಗಳನ್ನು ವಿವರಿಸಿದರು. ಮುಂದೆ ಇಂದಿರಾಗಾಂಧಿಯ ಆಡಳಿತದಲ್ಲಿ ಆರ್ಥಿಕವಾಗಿ ಜನರು ಇನ್ನೂ ಕಷ್ಟಗಳನ್ನು ಎದುರಿಸಬೇಕಾಗಬಹುದೆಂದರು. ಆದುದರಿಂದ ಆಟೋ ಚಾಲಕರು ಪ್ರಯಾಣಿಕರ ಮತ್ತು ಜನತೆಯ ವಿಶ್ವಾಸವನ್ನು ಪಡೆದು ಸರ್ಕಾರದ ಜನ ವಿರೋಧಿ ನೀತಿಯ ವಿರುದ್ಧ ಸಂಘಟಿತರಾಗಿ ಹೋರಾಟ ಮಾಡಬೇಕೆಂದು ಸಂಘದ ಕಾರ್ಯಕರ್ತರಿಗೆ ಕರೆ ಕೊಟ್ಟರು. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯ ಸಮಿತಿ ಕಾರ್ಯದರ್ಶಿ ಕಾಂ. ಎಂ. ಕೆ. ಭಟ್ ಮತ್ತು ಸಂಘದ ಅಧ್ಯಕ್ಷರಾದ ಕಾಂ. ಎಸ್. ಸೂರ್ಯನಾರಾಯಣರಾವ್‌ರವರುಗಳು ಚಾಲಕರ ಬೇಡಿಕೆಗಳು ಈಡೇರಬೇಕಾದರೆ ಸಂಘವನ್ನು ಬಲಗೊಳಿಸಬೇಕಾದ ಅವಶ್ಯಕತೆಯನ್ನು ಹೇಳಿ ಇತರ ಕಾರ್ಮಿಕ ಸಂಘಗಳ ಬೆಂಬಲ ಪಡೆದು ಹೋರಾಡಬೇಕೆಂದು ನುಡಿದರು. ಪ್ರಾರಂಭದಲ್ಲಿ ಸಂಘದ ಕಾರ್ಯದರ್ಶಿ ಕಾಂ. ಪಿ. ಕೆ. ಸುಬ್ರಮಣಿ ಚಾಲಕರ ಸಮಸ್ಯೆಗಳನ್ನು ವಿವರಿಸಿ ಪರಿಹಾರ ದೊರೆಯಬೇಕಾದರೆ ಚಾಲಕರು ಸದಸ್ಯರಾಗುವುದರ ಮೂಲಕ ಸಂಘವನ್ನು ಬಲಪಡಿಸಬೇಕೆಂದರು. ಮಾರ್ಚ್ ಎರಡನೆ ವಾರದಲ್ಲಿ ಬೆಂಗಳೂರು ನಗರ ಆಟೋರಿಕ್ಷಾ ಚಾಲಕರ ಸಮ್ಮೇಳನ ನಡೆಸಬೇಕೆಂದು ಸಭೆಯಲ್ಲಿ ತೀರ್ಮಾನಿಸಿ 50 ಸದಸ್ಯರನ್ನೊಳಗೊಂಡ ಸ್ವಾಗತ ಸಮಿತಿಯನ್ನು ರಚಿಸಲಾಯಿತು. ಸ್ವಾಗತ ಸಮಿತಿಯ ಅಧಿಕಾರ ವರ್ಗಕ್ಕೆ ಕೆಳಕಂಡವರನ್ನು ಆಯ್ಕೆ ಮಾಡಲಾಯಿತು. ಕಾಂ. ಎಸ್. ಸೂರ್ಯನಾರಾಯಣ ರಾವ್ ಅಧ್ಯಕ್ಷರು; ಜಿ. ಸುಬ್ಬರಾವ್, ಎಸ್. ಮುನಿನಂಜಪ್ಪ, ಜಿ. ರಾಮಮೂರ್ತಿ ಉಪಾಧ್ಯಕ್ಷರುಗಳು; ಕಾರ್ಯದರ್ಶಿಗಳು: ಕಾಂ. ಪಿ. ಕೆ. ಸುಬ್ರಮಣಿ, ಕಾಂ. ಎ. ವಿ. ರಮೇಶ್, ವಿ. ಎಸ್. ಸದಾಶಿವ, ಎಲ್. ಪಿ. ರಾಮಚಂದ್ರ; ಖಜಾಂಚಿ:ಬೀ. ನಾರಾಜ್. ಸಂಘದ ಉಪಾಧ್ಯಕ್ಷ ಜಿ. ಸುಬ್ಬರಾವ್ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಕೊನೆಯಲ್ಲಿ ಉಪಕಾರ್ಯದರ್ಶಿ ಕಾಂ. ಎ. ವಿ. ರಮೇಶ್ ವಂದನೆ ಸಲ್ಲಿಸಿದರು.

●

ತೀರ್ಥಹಳ್ಳಿಯಲ್ಲಿ ಪಕ್ಷದ ಕಾರ್ಯಕರ್ತರ ಸಭೆ

ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿಯಲ್ಲಿ 22-2-80 ರಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕಾರ್ಯಕರ್ತರ ಸಭೆಯು ಸೇರಿ, ತಾಲ್ಲೂಕು ಸಮಿತಿಯೊಂದನ್ನು ರಚಿಸಲಾಯಿತು. ಎಡೆಹಳ್ಳಿ ಪಂಚಾಯತ್ ಅಧ್ಯಕ್ಷ ಕಾಂ. ರಾಘವೇಂದ್ರರಾವ್ ಅವರು ಕಾರ್ಯದರ್ಶಿಗಳಾಗಿರುವ ಈ ಸಮಿತಿಯಲ್ಲಿ ಕಾಂ. ಕೆ. ಎಂ. ಶ್ರೀನಿವಾಸ, ಪೀರ್ ಅಹಮದ್, ಚಾಂದ್ ಸಾಬ್, ಹೆಗ್ಗೋಡು ತಿಮ್ಮಪ್ಪಗೌಡ (ಪಂಚಾಯತ್ ಅಧ್ಯಕ್ಷ) ಸಿರಿಬನ್ ಬಾಷ, ಕೆ. ಎಸ್. ಶ್ರೀಧರ ಮತ್ತು ಸುಬ್ಬಯ್ಯಗೌಡ (ಪಂಚಾಯತ್ ಅಧ್ಯಕ್ಷ) ಇವರುಗಳು ಉಳಿದ ಸದಸ್ಯರುಗಳಾಗಿರುವರು. ಸಭೆಯಲ್ಲಿ ಉಪಸ್ಥಿತರಿದ್ದ ಪಕ್ಷದ ಜಿಲ್ಲಾ ಸಮಿತಿ ಕಾರ್ಯದರ್ಶಿ ಕಾಂ. ಚಂದು ಕುಟ್ಟಿಯವರು ರಾಜ್ಯಸಮಿತಿ ತೀರ್ಮಾನಗಳ ಬಗ್ಗೆ ವರದಿ ಮಾಡಿದರು.

ಇಂದಿರಾ ಸರಕಾರವು ಅಧಿಕಾರಕ್ಕೆ ಬಂದಮೇಲೆ ಅರಣ್ಯ ಅಧಿಕಾರಿಗಳು ಕಾಡಿನಿಂದ ಸೌದೆ ಶೇಖರಣೆ ಮಾಡಲು ಕೊಡುವ ಲೈಸನ್ಸನ್ನು ರದ್ದುಪಡಿಸಿದುದರ ಪರಿಣಾಮವಾಗಿ ತಾಲೂಕಿನ ರೈತ-ಕಾರ್ಮಿಕವರ್ಗ ಬಹಳ ಕಷ್ಟಕ್ಕೀಡಾಗಿದೆ. ಅರಣ್ಯ ಅಧಿಕಾರಿಗಳ ಈ ಕ್ರಮವನ್ನು ಖಂಡಿಸಿದ ಸಭೆಯು, ಕೂಡಲೇ ಮತ್ತೆ ಸೌದೆ ಶೇಖರಣೆಗೆ ಲೈಸೆನ್ಸನ್ನು ಕೊಡುವಂತೆ ಒತ್ತಾಯಿಸಿದೆ. ಸರಕಾರವು ಮತ್ತು ಅರಣ್ಯ ಅಧಿಕಾರಿಗಳು ಈ ಬಗ್ಗೆ ಕೂಡಲೇ ಕ್ರಮವಹಿಸದಿದ್ದಲ್ಲಿ ತಾಲೂಕಿನಾದ್ಯಂತ ಜನತೆಯ ಹೋರಾಟವನ್ನು ಸಂಘಟಿಸಲೂ ಸಭೆಯೂ ಕರೆ ಇತ್ತಿದೆ. ಜನರ ಸಮಸ್ಯೆಗಳ ಪರಿಹಾರದತ್ತ ಗಮನ ಹರಿಸುವುದಕ್ಕೆ ಬದಲಾಗಿ, ಜನರ ಗಮನವನ್ನು ಬೇರೆಡೆಗೊಯ್ಯುವ ರಾಜ್ಯದ ಮುಖ್ಯ ಮಂತ್ರಿಯವರ ಕ್ರಮವನ್ನು ಸಭೆಯು ಟೀಕಿಸಿತಲ್ಲದೆ, ಜೀವನಾವಶ್ಯಕ ವಸ್ತುಗಳನ್ನು ನಿಗದಿ ದರದಲ್ಲಿ ಒದಗಿಸುವಂತೆ ಸರಕಾರವನ್ನು ಒತ್ತಾಯಿಸಿದೆ.

ಕಾಂಗ್ರೆಸ್ಸೇತರ ಸರಕಾರಗಳಿರುವ ಒಂಭತ್ತು ರಾಜ್ಯಗಳಲ್ಲಿ ವಿಧಾನಸಭೆಗಳನ್ನು ವಿಸರ್ಜಿಸಿದ ಕೇಂದ್ರ ಸರಕಾರದ ಕ್ರಮವನ್ನು ಖಂಡಿಸಿದ ಸಭೆಯು, ಎಲ್ಲಾ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳು ಒಂದಾಗಿ ಸರ್ವಾಧಿಕಾರದ ಸವಾಲನ್ನು ಎದುರಿಸಲು ಸಭೆಯು ಕರೆ ಇತ್ತಿದೆ.

●

ಬೆಲೆಏರಿಕೆ ವಿರುದ್ಧ ಮುಖ್ಯಮಂತ್ರಿಗೆ ಮನವಿ

ದಿನನಿತ್ಯ ಬಳಕೆಯ ವಸ್ತುಗಳಾದ ಅಕ್ಕಿ, ರಾಗಿ, ಗೋಧಿ, ಸಕ್ಕರೆ, ಸೋಪು, ಬೇಳೆ, ಸೀಮೆಎಣ್ಣೆ ಮುಂತಾದುವುಗಳ ಬೆಲೆಯು ಗಗನಕ್ಕೆ ಏರುತ್ತಿರುವುದರ ವಿರುದ್ಧ ಬಿಜಾಪುರ ಜಿಲ್ಲೆಯ ಸಿ. ಪಿ. ಐ. (ಎಂ) ಮತ್ತು ಸಿ. ಪಿ. ಐ. ಪಕ್ಷಗಳು ಮುಖ್ಯಮಂತ್ರಿಗಳಿಗೆ ಇತ್ತೀಚೆಗೆ ಮನವಿಯೊಂದನ್ನು ಸಲ್ಲಿಸಿ ತುರ್ತುಕ್ರಮವನ್ನು ಕೈಗೊಳ್ಳಲು ಒತ್ತಾಯಿಸಿದ್ದಾರೆ.

ಬಿಜಾಪುರ ಜಿಲ್ಲೆಯ ಬರಗಾಲ ಪೀಡಿತ ಪ್ರದೇಶವಾಗಿದ್ದು ಇಲ್ಲಿನ ಜನಜೀವನ ಕಷ್ಟಕರವಾಗಿದೆ ಎಂದು ಮನವಿಯಲ್ಲಿ ತಿಳಿಸಲಾಗಿದ್ದು ನಿರುದ್ಯೋಗ ನಿವಾರಿಸಲು ಸರ್ಕಾರವು ಪರ್ಯಾಯ ಉದ್ಯೋಗಗಳನ್ನು ಒದಗಿಸಬೇಕೆಂದು ಆಗ್ರಹಪಡಿಸಲಾಗಿದೆ ಮನವಿಗೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕಾಂ. ಕಲಾದ್ಗಿ ಮತ್ತು ಸಿ. ಪಿ. ಐ.ನ ಬಸವನ ಬಾಗೇವಾಡಿಯ ಶ್ರೀಕಾಂತ ಕರಾಟೆ ಸಹಿ ಹಾಕಿದ್ದಾರೆ.

●

ಎಸ್. ಎಫ್. ಐ. ಸಂತಾಪ ಸೂಚನೆ

ದಿನಾಂಕ 2-80 ರಂದು ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್. ಎಫ್. ಐ.) ರಾಜ್ಯಸಮಿತಿಯ ಸದಸ್ಯರು ಮತ್ತು ರಾಯಚೂರು ಶಾಖೆಯ ಅಧ್ಯಕ್ಷರಾದ ಕಾಮ್ರೇಡ್ ಶ್ಯಾಮಸುಂದರ್‌ರವರ ತಂದೆಯವರು ಲಾರಿಯಲ್ಲಿ ಪ್ರಯಾಣ ಮಾಡುತ್ತಿದ್ದಾಗ ಕೆಳಗೆ ಬಿದ್ದು ಅಕಾಲಿಕ ಮರಣಕ್ಕೆ ತುತ್ತಾಗಿರುವುದಕ್ಕೆ ಎಸ್. ಎಫ್. ಐ. ರಾಜ್ಯಸಮಿತಿಯ ಪರವಾಗಿ ಪ್ರಧಾನ ಕಾರ್ಯದರ್ಶಿ ಶಾಂತವೀರ ಕಾರಾಧ್ಯರವರು ತೀವ್ರ ಸಂತಾಪವನ್ನು ವ್ಯಕ್ತಪಡಿಸಿದ್ದಾರೆ.

●

ಸೇರಾಮ್‌ಪೋರ್‌ನಲ್ಲಿ ಸಿ. ಪಿ. ಐ. (ಎಂ) ಜಯ

[ಒಂದನೇ ಪುಟದಿಂದ]

ಯಿಟ್ಟಿದ್ದರೂ, ಲೋಕಸಭಾ ಚುನಾವಣೆಯ ಬೆನ್ನಲ್ಲೆ ನಡೆದ ಕೇರಳದ ವಿಧಾನ ಸಭಾ ಚುನಾವಣೆಯಲ್ಲಿ ಅಲ್ಲಿಯ ಜನತೆ ಎಡ ಪ್ರಜಾಪ್ರಭುತ್ವ ರಂಗಕ್ಕೆ ಪ್ರಚಂಡ ಬಹುಮತವನ್ನಿತ್ತಿತು. ಇಂದಿರಾ ಪ್ರಭಾವವೇನೂ ಪರಿಣಾಮ ಬೀರಲಿಲ್ಲ. ಈಗ ಮತ್ತೆ ಸೇರಾಮ್‌ಪೋರ್‌ನಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಅಭ್ಯರ್ಥಿಯು ಕಾಂಗ್ರೆ ಅಭ್ಯರ್ಥಿಗಿಂತ 1,06,107 ರಷ್ಟು ಹೆಚ್ಚಿನ ಮತ ಪಡೆದು ವಿಜಯಿಯಾಗಿರುವುದು ಮತ್ತು ಇದೇ ಸಂದರ್ಭದಲ್ಲಿ ಉಳಿದೆಡೆಗಳಲ್ಲಿ ಕಾಂಗ್ರೆ ಅಭ್ಯರ್ಥಿಗಳು ಜಯಗಳಿಸಿದ್ದನ್ನು ನೋಡಿದಲ್ಲಿ ಒಂದು ವಿಚಾರವಂತೂ ಸ್ಪಷ್ಟವಾಗುತ್ತಲಿದೆ. ಇಂದಿರಾ ಕಾಂಗ್ರೆಸ್ಸಿನ ಧಾಳಿಯನ್ನು ರಾಜಕೀಯವಾಗಿ ಮತ್ತು ಪರಿಣಾಮಕಾರಿಯಾಗಿ ವಿರೋಧಿಸಲು ಸಾಧ್ಯವಿರುವುದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ನೇತೃತ್ವದ ಎಡ ಮತ್ತು ಎಡ ಪ್ರಜಾಪ್ರಭುತ್ವ ರಂಗಗಳಿಂದ ಮಾತ್ರ ಸಾಧ್ಯ. ಭಿನ್ನವಾದ ಆರ್ಥಿಕ-ಸಾಮಾಜಿಕ ಕಾರ್ಯಕ್ರಮಗಳ ಆಧಾರದಲ್ಲಿ, ಶ್ರಮಜೀವಿಗಳ ಸಂಘಟನೆ ಮತ್ತು ಹೋರಾಟಗಳನ್ನು ಬೆಳೆಸುತ್ತಾ ಎಲ್ಲಾ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳು ಒಂದಾದಲ್ಲಿ ಮಾತ್ರ ಸರ್ವಾಧಿಕಾರದ ಸವಾಲನ್ನು ಎದುರಿಸಲು ಸಾಧ್ಯ ಎಂಬುದು ಸ್ಪಷ್ಟ. ಘೋಷಣೆ ಮತ್ತು ಭಾಷಣ ಹಾಗೂ ಒಳಜಗಳಗಳಿಗೆ ಹೆಚ್ಚಿಗೆ ಸಮಯ ವ್ಯರ್ಥ ಮಾಡದೆ, ಜನರ ಸಮಸ್ಯೆಗಳ ಬಗ್ಗೆ ಹೋರಾಡುವುದು ಮತ್ತು ಎಡ ಪ್ರಜಾಸತ್ತಾತ್ಮಕ ಶಕ್ತಿಗಳೆಲ್ಲಾ ಒಂದುಗೂಡುವಂತೆ ಮಾಡುವುದರಿಂದ ಮಾತ್ರ ಮುಂದೆ ಒಂಭತ್ತು ರಾಜ್ಯಗಳಲ್ಲಿ ನಡೆಯತಕ್ಕ ವಿಧಾನ ಸಭಾ ಚುನಾವಣೆಗಳಲ್ಲಿ ಇಂದಿರಾ ಕಾಂಗ್ರೆಸ್ಸಿನ ಸವಾಲನ್ನೆದುರಿಸಬಹುದು. ಜನತಾ ಪಕ್ಷ, ಲೋಕದಳ, ಕಾಂಗ್ರೆಸ್(ಯು) ಮೊದಲಾದ ಪಕ್ಷಗಳ ಮುಂದಾಳುಗಳೂ, ಬೆಂಬಲಿಗರೂ ಇದನ್ನರಿತು ಜನತೆಯ ಸಮಸ್ಯೆಗಳ ಪರಿಹಾರಕ್ಕಾಗಿ ಹೋರಾಡುವತ್ತ ಗಮನಹರಿಸಬೇಕು.

●

ಸಂಪಾದಕೀಯ

[ಒಂದನೇ ಪುಟದಿಂದ]

ಅನೇಕ ಜಿಲ್ಲಾ ಸಮಿತಿಗಳೂ, ಲೋಕಸಭಾ ಸದಸ್ಯರೂ ಒತ್ತಾಯಿಸುತ್ತಿದ್ದರೂ ದಿಲ್ಲಿಯ ನಾಯಕರು ಈ ವಾದವನ್ನೊಪ್ಪಲು ತಯಾರಿಲ್ಲ. ಅವರಿಗೆ ಕರ್ನಾಟಕದಲ್ಲಿ ಕಾಂಗ್ರೆ ಸರಕಾರವಿದ್ದರೆ ಸಾಕು. ಅಷ್ಟೇ ಅಲ್ಲದೆ ಈಗಿನ ಮುಖ್ಯಮಂತ್ರಿಯವರು ಇಂದಿರಾ-ಸಂಜಯ್‌ರವರ ಆಪ್ತರಾಗಿದ್ದು ಅವರ ವಿಶ್ವಾಸ-ನಂಬಿಕೆಗಳನ್ನು ಹೊಂದಿದವರಾದುದರಿಂದ ಗುಂಡೂರಾಯರ ಮಂತ್ರಿಮಂಡಲ ಮುಂದುವರಿಯುವುದರಲ್ಲಿ ಸಂಶಯವಿಲ್ಲ. ಈ ವಾಸ್ತವ ಸ್ಥಿತಿಯನ್ನರಿತೇ ಗುಂಡೂರಾಯರ ವಿರೋಧ ಗುಂಪಿನಲ್ಲಿದ್ದ ವೀರಪ್ಪ ಮೊಯಿಲಿ ಮುಂತಾದವರು ಈಗ ರಾಯರ ಬೆಂಬಲಿಗರಾಗಿದ್ದಾರೆಂದು ತಿಳಿದು ಬಂದಿದೆ.

ಆದರೆ ಮೇಲಿನವರ ಆಶೀರ್ವಾದದಿಂದಲೇ ಅಧಿಕಾರ ನಡೆಸುವುದು ಸುಲಭವಲ್ಲ. ಜನರ ಸಮಸ್ಯೆಗಳನ್ನು ಬಗೆಹರಿಸುವುದರಲ್ಲೂ, ದಕ್ಷ ಆಡಳಿತೆಯನ್ನು ನೀಡುವುದರಲ್ಲೂ ಸಂಪುಟದ ಭವಿಷ್ಯ ನಿಂತಿದೆ. ಯಾವುದೇ ಮಂತ್ರಿಮಂಡಲವಿರುವ ಕರ್ನಾಟಕದ ಶ್ರಮಜೀವಿ ಜನವಿಭಾಗಗಳು ತಂತಮ್ಮ ಹೋರಾಟಗಳನ್ನು ಮುಂದುವರಿಸಲೆಂದೂ ನಮ್ಮ ರಾಜ್ಯದಲ್ಲಿ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳು ಬೆಳೆಯಲೆಂದೂ ನಮ್ಮ ಹಾರೈಕೆ.

○

ಗ್ರೋಮಿಕೊ ಭೇಟಿ

[ಒಂದನೇ ಪುಟದಿಂದ]

ವರಿ 14ರ ಸಂಚಿಕೆಗಳಲ್ಲಿ,ಅಮೇರಿಕನ್ ಸರ್ಕಾರದ ಸಿ. ಐ. ಎ. ಮೂಲಕ ಇಜಿಪ್ಟ್, ಚೀನಾಗಳಲ್ಲಿರುವ ಹಿಂದೆ ಸರಬರಾಜು ಮಾಡಲ್ಪಟ್ಟ ರಶ್ಯನ್ ಶಸ್ತ್ರಾಸ್ತ್ರಗಳನ್ನು ಪಾಕಿಸ್ತಾನದ ಮೂಲಕ ಅಫ್‌ಘಾನಿಸ್ತಾನದ ದಂಗೆಕೋರ ಗುಂಪುಗಳಿಗೆ ಸರಬರಾಜು ಮಾಡುತ್ತಿದೆ ಎಂದು ವರದಿಮಾಡಿದೆ. ಇದನ್ನು ಶ್ವೇತಭವನದ ಅಧಿಕಾರಿಗಳೂ ಒಪ್ಪಿರುವುದಲ್ಲದೆ, ಈಜಿಪ್ಟಿನ ರಕ್ಷಣಾ ಮಂತ್ರಿ ಕಮಾಲ್ ಹಸನ್ ಅಲಿ ಹೇಳಿಕೆ ಸಹ ಸಮರ್ಥಿಸಿದೆ.

ಅಫ್‌ಘಾನಿಸ್ತಾನದ ಬೆಳವಣಿಗೆಗಳ ಬಗ್ಗೆ ಭಾರತ ಸರ್ಕಾರದ ನಿಲುವಾದರೂ ಏನು? ಯಾವುದೇ ದೇಶದಲ್ಲಿ ವಿದೇಶಿ ಸೈನ್ಯಗಳ ಹಾಜರಿ ಅಥವಾ ನೆಲೆಗಳ ರಚನೆಯನ್ನು ಭಾರತ ವಿರೋಧಿಸುತ್ತದೆ. ಆದರೆ ಅಫ್‌ಘಾನಿಸ್ತಾನದಲ್ಲಿ ಆಂತರಿಕ ವಿಧ್ವಂಸಕ ಚಟುವಟಿಕೆ ನೀಡುವ ಮೂಲಕ ಹಸ್ತಕ್ಷೇಪ ಮಾಡುವ ದೇಶಗಳನ್ನು ಸಹ ಭಾರತ ಅಷ್ಟೇ ಪ್ರಬಲವಾಗಿ ಖಂಡಿಸುತ್ತದೆ. ಇದು ವಿಶ್ವಸಂಸ್ಥೆಯಲ್ಲಿ ಭಾರತದ ಶಾಶ್ವತ ಪ್ರತಿನಿಧಿ ಪ್ರತಿಪಾದಿಸಿದ ನಿಲುವು. 1954ರಿಂದಲೂ ಭಾರತದ ವಿರುದ್ಧ ಉಪಯೋಗಿಸಬಾರದೆಂದು ಉಪದೇಶದೊಂದಿಗೆ, ಅಮೇರಿಕದಿಂದ ಅಪಾರ ಶಸ್ತ್ರಾಸ್ತ್ರವನ್ನು ಪಾಕಿಸ್ತಾನ ಪಡೆಯುತ್ತಾ ಬಂದಿದ್ದು, ಪ್ರತಿಬಾರಿ ಭಾರತದ ವಿರುದ್ಧವೇ ಪ್ರಯೋಗಿಸಲ್ಪಟ್ಟಿದೆ. ಅಫ್‌ಘಾನಿಸ್ತಾನದ ಬೆಳವಣಿಗೆಗಳನ್ನು ನೆವಮಾಡಿಕೊಂಡು ಅಮೇರಿಕಾ ಪುನಃ ಪಾಕಿಸ್ತಾನವನ್ನು ಅಪಾಯಕಾರಿಯಾಗಿ ಶಸ್ತ್ರ ಸನ್ನದ್ಧಗೊಳಿಸುತ್ತಿದೆ, ಇದರಿಂದ ಭಾರತದ ಭದ್ರತೆಗಿರುವ ಬೆದರಿಕೆಯ ಹಿನ್ನೆಲೆಯಲ್ಲಿ, ದೇಶದ ಭದ್ರತೆ ಬಗ್ಗೆ ಕಾಳಜಿ ಇರುವ ಯಾವುದೇ ಸರ್ಕಾರ ತೆಗೆದುಕೊಳ್ಳಬಹುದಾದ ಸರಿಯಾದ ನಿಲುವು ಇದೆ.

ಇಷ್ಟೇ ಅಲ್ಲದೆ ಈ ಸಂದರ್ಭವನ್ನು ಪಾಕಿಸ್ತಾನದ ಜಿಯಾ-ಉಲ್-ಹಕ್ ತಮ್ಮ ದೇಶದಲ್ಲಿ ಪ್ರಜಾಸತ್ತಾತ್ಮಕ ಚಳುವಳಿಯನ್ನು ಹತ್ತಿಕ್ಕಲು, ಆಂತರಿಕ ಸಮಸ್ಯೆಗಳಿಂದ ಆಚೆಗೆ ಬೇರೆ ಸಮಸ್ಯೆಗಳಿಗೆ ಜನರ ಗಮನ ಸೆಳೆಯಲು ಹಾಗೂ ತಮ್ಮ ಪಟ್ಟ ಭದ್ರ ಮಾಡಿಕೊಳ್ಳಲು ಬಳಸುತ್ತಿರುವುದನ್ನೂ ಗಮನಿಸಬೇಕು.

ಭಾರತದ ನಿಲುವು ಅಮೇರಿಕನ್ ಮತ್ತು ಇತರ ಸಾಮ್ರಾಜ್ಯಶಾಹಿ ಶಕ್ತಿಗಳಿಗೆ ಸ್ವಾಭಾವಿಕವಾಗಿಯೇ ಇಷ್ಟವಾಗಿಲ್ಲ. ಪಾಕಿಸ್ತಾನಕ್ಕೆ ಸರಬರಾಜಾಗುತ್ತಿರುವ ಅಧಿಕ ಶಸ್ತ್ರಾಸ್ತ್ರಗಳು ಭಾರತದ ವಿರುದ್ಧ ಉಪಯೋಗಿಸಲಾಗುವುದಿಲ್ಲ ಎಂದು ಭಾರತವನ್ನು ತೃಪ್ತಿಪಡಿಸಲು ಅಸಾಧ್ಯವಾಗಿರುವುದರಿಂದ, ಬೇರೆ ರೀತಿಯ ಒತ್ತಡಗಳಿಂದ ಭಾರತದ ನಿಲುವು ಬದಲಾಯಿಸಲು ಪ್ರಯತ್ನಿಸುತ್ತಿವೆ. ಭಾರತ-ರಷ್ಯಾದ ಮಧ್ಯೆ ಅಪನಂಬಿಕೆ ತರಿಸುವ ಪ್ರಯತ್ನ ಇದರಲ್ಲೊಂದು. ಇದಕ್ಕಾಗಿಯೇ ಯೂರೋಪು ಅಮೇರಿಕಾದ ಪತ್ರಿಕೆಗಳು ಗ್ರೋಮಿಕೊ ಭೇಟಿ 'ವೈಫಲ್ಯ' ಬಗ್ಗೆ ಅಬ್ಬರದ ಅಪಪ್ರಚಾರ ನಡೆಸಿದವು. ಭಾರತದ ಪತ್ರಿಕೆಗಳೂ ಇದನ್ನೇ ಪ್ರತಿಧ್ವನಿಸಿದವು.

ಅಮೇರಿಕಾದ ಕುತಂತ್ರಗಳಿಗೆ ಕಣ್ಣು ಮುಚ್ಚಿಕೊಂಡು, ಅಂಥ ರಶ್ಯಾ ವಿರೋಧಿ ನೀತಿಯ ಫಲವಾಗಿ ಭಾರತದ ಭದ್ರತೆಯ ಹಿತಾಶಕ್ತಿಗಳ ಮೇಲಾಗುವ ಪರಿಣಾಮದ ಬಗ್ಗೆ ಸಹ ಈ ಪತ್ರಿಕೆಗಳಿಗೆ ಕಾಳಜಿ ಇದ್ದಂತಿಲ್ಲ. ಹೀಗೆ ಅಫ್‌ಘಾನಿಸ್ಥಾನದ ಬೆಳವಣಿಗೆಗಳ ಎಲ್ಲಾ ಮುಖಗಳನ್ನು ಗಮನಿಸಿದಾಗ: ತೈಲ ಸಮೃದ್ಧ ಪಶ್ಚಿಮ ಏಷ್ಯಾದ ರಾಷ್ಟ್ರಗಳ ಮೇಲೆ ಸಂಪೂರ್ಣ ಹತೋಟಿ ಸಾಧಿಸಲು ಪ್ರಯತ್ನಿಸುತ್ತಿರುವ ಅಮೇರಿಕಾದ ಕುತಂತ್ರಗಳಿಂದ ಪ್ರತ್ಯೇಕಿಸಿ ನೋಡುವವರು ಮಾತ್ರ ರಶ್ಯಾದ ಪ್ರವೇಶವನ್ನು 'ಆಕ್ರಮಣ' ಎಂದೂ ರಶ್ಯಾ ಸೇನಾಪಡೆ ಹಿಂತೆಗೆಯಬೇಕೆಂದು ಎದೆ ಬಡಿದುಕೊಂಡು ಬೊಬ್ಬಿಡಬಲ್ಲರು, ಎಂದು ತಿಳಿಯುತ್ತದೆ.

ಅಫ್‌ಘಾನಿಸ್ತಾನದ ಬೆಳವಣಿಗೆಗಳ ಬಗ್ಗೆ ಭಾರತದ ನಿಲುವು ಈವರೆಗೆ, ಇದನ್ನು ಬದಲಾಯಿಸಲು ಸಾಕಷ್ಟು ಒತ್ತಡ ಇದ್ದಾಗ್ಯೂ, ಸರಿಯಾಗಿದೆ. ಆದರೆ ಮುಂದೆ ಅಮೇರಿಕಾದ ಒತ್ತಡದಿಂದ ಈ ನಿಲುವಿನಿಂದ ಸರಿಯುವ ಸಂಭವವಿಲ್ಲದಿಲ್ಲ.

ಆದ್ದರಿಂದ ಭಾರತದ ಸ್ವಾತಂತ್ರ್ಯ, ಸಾರ್ವಭೌಮತ್ವ, ಅಲಿಪ್ತತೆಗೆ ಒದಗಿರುವ ಹೊಸ ಅಪಾಯಗಳನ್ನು ಅರಿತು, ಭಾರತ-ಸೋವಿಯತ್ ಬಾಂಧವ್ಯ ಕೆಡಿಸಲು ಪ್ರಯತ್ನಿಸುತ್ತಿರುವ ಪ್ರಯತ್ನಗಳನ್ನು ಪ್ರತಿಭಟಿಸಲು, ವಿಫಲಗೊಳಿಸಲು ಪ್ರಗತಿಪರ ಹಾಗೂ ಸಾಮ್ರಾಜ್ಯಶಾಹಿ ವಿರೋಧಿ ಶಕ್ತಿಗಳು ಪ್ರಯತ್ನಿಸಬೇಕಾಗಿದೆ.

○

ಒಂಬತ್ತು ರಾಜ್ಯ ವಿಧಾನಸಭೆಗಳ ವಿಸರ್ಜನೆಯನ್ನು ಸಿ. ಐ. ಟಿ. ಯು. ಖಂಡಿಸುತ್ತಸೆ

18-2-1980 ರಂದು ಸಿ. ಐ ಟಿ. ಯು. ಅಧ್ಯಕ್ಷರಾದ ಕಾಂ. ಬಿ. ಟಿ. ರಣದಿವೆಯವರು ಕೆಳಕಂಡ ಪತ್ರಿಕಾ ಹೇಳಿಕೆಯನ್ನು ಹೊರಡಿಸಿದ್ದಾರೆ.

ಒಂಬತ್ತು ರಾಜ್ಯಗಳ ವಿಧಾನಸಭೆಗಳನ್ನು ವಿಸರ್ಜಿಸಿ ಈ ರಾಜ್ಯಗಳ ಆಡಳಿತವನ್ನು ಕೇಂದ್ರ ಸರ್ಕಾರವು ವಹಿಸಿಕೊಂಡಿರುವುದು ನಮ್ಮ ದೇಶದಲ್ಲಿ ಏಕ ಪಕ್ಷದ ಅಧಿಕಾರಶಾಹಿ ಆಡಳಿತವನ್ನು ಹೇರುವ ದಿಸೆಯಲ್ಲಿ ಒಂದು ಹೆಜ್ಜೆಯಾಗಿದೆ. ಸಿ. ಐ. ಟಿ. ಯು. ಈ ಕ್ರಮವನ್ನು ಉಗ್ರವಾಗಿ ಖಂಡಿಸುತ್ತದೆ. ಶ್ರೀಮತಿ ಗಾಂಧಿಯವರ ಸರ್ಕಾರದ ಸರ್ವಾಧಿಕಾರಿ ಧೋರಣೆಗಳನ್ನು ಪ್ರತಿರೋಧಿಸಲು ಜನತೆಯಲ್ಲಿ ಸಿ. ಐ. ಟಿ. ಯು. ಮನವಿಮಾಡಿಕೊಳ್ಳುತ್ತದೆ.

ಮತ್ತೊಮ್ಮೆ ಜನತೆಯ ಮೇಲೆ ಚುನಾವಣೆಗಳು ಹೇರಲ್ಪಟ್ಟಿರುವುದರಿಂದ, ಅಧಿಕಾರಶಾಹಿ ವಿರೋಧಿ ಹೋರಾಟದಲ್ಲಿ ಎಲ್ಲಾ ಪ್ರಜಾಸತ್ತಾತ್ಮಕ ಶಕ್ತಿಗಳು ಒಟ್ಟಾಗಿ ಅಣಿನೆರೆದು ಶ್ರೀಮತಿ ಗಾಂಧಿಯವರ ಪಕ್ಷಕ್ಕೆ ಮುಂಬರುವ ಚುನಾವಣೆಗಳಲ್ಲಿ ಜಯ ಲಭಿಸದಂತೆ ಮಾಡಬೇಕೆಂದು ಸಿ. ಐ. ಟಿ. ಯು. ಎಲ್ಲಾ ಪ್ರಜಾಸತ್ತಾತ್ಮಕ ಶಕ್ತಿಗಳಿಗೆ ಕರೆಕೊಡುತ್ತದೆ.

ಚುನಾವಣಾ ಕಾಲಗದಲ್ಲಿ ಇತರ ಪ್ರಜಾಸತ್ತಾತ್ಮಕ ಶಕ್ತಿಗಳ ಜತೆಗೂಡಿ ನಾಗರಿಕ ಸ್ವಾತಂತ್ರ್ಯವನ್ನು ಹತ್ತಿಕ್ಕಿ ಭಾರತದಲ್ಲಿ ಸರ್ವಾಧಿಕಾರವನ್ನು ಪ್ರತಿಷ್ಠಾಪಿಸುವ ಪಿತೂರಿಯನ್ನು ವಿಫಲಗೊಳಿಸಬೇಕೆಂದು ಸಿ. ಐ. ಟಿ. ಯು. ಕಾರ್ಮಿಕ ವರ್ಗಕ್ಕೆ ಮನವಿಮಾಡಿಕೊಳ್ಳುತ್ತದೆ.

○

ಗುಮ್ಮನಕಾನು ಟೀ ತೋಟದಲ್ಲಿ ಬಹಿರಂಗ ಸಭೆ

ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲ್ಲೂಕಿನಲ್ಲಿರುವ ಗುಮ್ಮನಕಾನು ಟೀ ತೋಟದಲ್ಲಿ ತಾ. 24-2-1980 ರಂದು ಬೆಳಿಗ್ಗೆ 10 ಗಂಟೆಗೆ ತೋಟಕಾರ್ಮಿಕರ ಬಹಿರಂಗ ಸಭೆ ನಡೆಯಿತು. ಕಾಂ. ಕೆ. ಸುಕುಮಾರ್ ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು.

ಸಭೆಯನ್ನುದ್ದೇಶಿಸಿ ಬೆಂಗಳೂರಿನ ಆಟೋರಿಕ್ಷಾ ಚಾಲಕರ ಸಂಘದ ಕಾರ್ಯದರ್ಶಿ ಕಾ. ಪಿ. ಕೆ. ಸುಬ್ರಸುಬ್ರಮಣಿ, ಕರ್ನಾಟಕ ಪ್ರೊವಿನ್ಷಿಯಲ್ ಪ್ಲಾಂಟೇಷನ್ ವರ್ಕರ್ಸ್ ಯೂನಿಯನ್ನಿನ ಉಪಾಧ್ಯಕ್ಷ ಕಾಂ. ಎ. ಸಿ ಕೇಶವ, ಸಂಸೆ ಟೀ ತೋಟದ ಎಸ್ಟೇಟ್ ಕಮಿಟಿಯ ಸಲಹೆಗಾರ ಶ್ರೀಕಿಟ್ಟು, ಅಧ್ಯಕ್ಷ ಶ್ರೀ ಮುನಿಯಾಂಡಿ ಮತ್ತು ಕಾಂ. ಸಿ. ನಂಜುಂಡಪ್ಪ ಮಾತನಾಡಿದರು.

ಸಭೆಯಲ್ಲಿ ಕುದುರೆಮುಖದ ಎಚ್. ಎಸ್. ಸಿ. ಎಲ್. ಎಂಪ್ಲಾಯೀಸ್ ಅಸೋಸಿಯೇಷನ್ನಿನ ಪ್ರಧಾನ ಕಾರ್ಯದರ್ಶಿ ಕಾಂ. ಬಾಬಣ್ಣ, ಸಂಸೆ ಗ್ರಾಮ ಪಂಚಾಯತ್ ಸದಸ್ಯೆ ಶ್ರೀಮತಿ ಅಮೃತಮ್ ಮತ್ತು ಗುಮ್ಮನಕಾನು ಟೀ ತೋಟದ ಎಸ್ಟೇಟ್ ಕಮಿಟಿಯ ಅಧ್ಯಕ್ಷ ಶ್ರೀ ಪ್ಯಾರೂಸಾಹೇಬ್ ಉಪಸ್ಥಿತರಿದ್ದರು.

ಆಡಳಿತ ಮಂಡಳಿಯು ತ್ವರಿತವಾಗಿ ಕಾರ್ಮಿಕರ ಬೇಡಿಕೆಗಳನ್ನು ಈಡೇರಿಸದಿದ್ದರೆ ಗುಮ್ಮನಕಾನು ಮತ್ತು ಸಂಸೆ ಟೀ ತೋಟಗಳ ಕಾರ್ಮಿಕರು ಮುಷ್ಕರ ಹೂಡಬೇಕೆಂದು ಸಭೆಯು ನಿರ್ಣಯಿಸಿತು.

●

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560 003, and Published by him on behalf of the Communist Party of India (Marxist). Karnataka State Committee, L-56, K. V. Temple Street, Sultanpet, Bangalore-560 053.
Editorial and managerial office : L-56, K. V. Temple Street, Sultanpet, Bangalore-560 053. Phone : 24154
EDITOR : M. K. BHAT